**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ ಪಿಹೆಚ್.ಡಿ
ಮುಖ್ಯಸ್ಥರು ಕನ್ನಡ ವಿಭಾಗ
ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ– ೯೪೪೮೭೬೫೩೦.

# ಸರ್ವಜ್ಞನ ರಾಜಕೀಯ ಪ್ರಜ್ಞೆ

**ಪ್ರಸ್ತಾವನೆ :**

ಕರ್ನಾಟಕದ ಇತಿಹಾಸ ಖಚಿತವಾಗಿ ತಿಳಿದು ಬಂದಿರುವುದು ಕ್ರಿ.ಪೂ. ೪ ನೆಯ ಶತಮಾನ. ಅಂದರೆ ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾದ ಕಾಲದಿಂದ ಎಂದು ಹೇಳಬಹುದು. ಅದರ ಹಿಂದಿನ ಚರಿತ್ರೆ ವೇದ ಕಾಲದಿಂದಲೂ ಶಕ್ತಿಗಳಾದ ಸೂರ್ಯ,ಅಗ್ನಿ,ವರುಣ ಮುಂತಾದವುಗಳನ್ನು ಅವುಗಳ ಆಶೀರ್ವಾದಕ್ಕಾಗಿಯೋ, ಕೋಪಗಳನ್ನು ಶಮನಗೊಳಿಸುವುದಕ್ಕಾಗಿಯೋ, ಪೂಜೆ ಪುನಸ್ಕಾರ ಆಹುತಿ ಕೊಡುತ್ತಿದ್ದರು. ಮನುಷ್ಯನ ಜೀವನ ಹಾಗೂ ಬದುಕು ಜಟಿಲ ಸಮಸ್ಯೆಗಳು ಕಾಡಲಾರಂಬಿಸಿತು. ಅದಕ್ಕಾಗಿ ಜೀವನದ ರೀತಿ, ನೀತಿ ಸುಗಮಗೊಳಿಸುವುದಕ್ಕಾಗಿ ಸಮಾಜದಲ್ಲಿ ಮುಖಂಡರು ದಯೆ, ಅಹಿಂಸೆ, ಪ್ರೇಮ, ಸಹಿಷ್ಣುತೆ, ಔದಾರ್ಯ ಮುಂತಾದ ಒಳ್ಳೆಯ ಗುಣಗಳನ್ನು ಹರಡಲು ಪ್ರಯತ್ನಿಸಿದರು.

ಕರ್ನಾಟಕದಲ್ಲಿ ಜೈನ ಸವಣರ ಸಂಚಾರ ವಿಶೇಷವಾಗಿ ನಡೆದಂತೆ ಕಂಡುಬರುತ್ತದೆ. ಹೀಗೆ ಧಾರ್ಮಿಕ ಪ್ರಚಾರದ ಅನುಯಾಯಿಗಳು ಹಲವು ರಾಜ್ಯಗಳನ್ನು ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಕಾರಣೀಭೂತರಾಗಿದ್ದಾರೆ. ನಂದರು, ಮೌರ್ಯರು, ಶಾತವಾಹನರು, ಕದಂಬರು, ಗಂಗರು ಇನ್ನೂ ಮುಂತಾದವರು ಕರ್ನಾಟಕದ ಯಾವುದೇ ಭಾಗವನ್ನು ಸಮೃದ್ಧಿಗೊಳಿಸಲು ಪಣತೊಟ್ಟಿದ್ದರು. ಆ ಕಾಲಘಟ್ಟದಲ್ಲಿ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಸಾಮ್ರಾಜ್ಯ ಕಾಲದಲ್ಲಿ ಕನ್ನಡ ಜನತೆ ಚಾಲುಕ್ಯರನ್ನು ಸ್ಮರಿಸಬೇಕಾಗುತ್ತದೆ. ಏಕೆಂದರೆ ಬೇರೆ ರಾಜ್ಯಗಳ ಎದುರು ಏರಿಹೋಗಿ ತಮ್ಮ ರಾಜಕೀಯ ಕ್ಷೇತ್ರವನ್ನು ವಿಸ್ತರಿಸುವುದಕ್ಕಾಗಿ, ಚಾಲುಕ್ಯ ರಾಜರು ಕರ್ನಾಟಕ ಸಂಸ್ಕೃತಿಯನ್ನು ಕಾಪಾಡಿ ಸರ್ವತೋಮುಖವಾಗಿ ಶ್ರಮಿಸಿದರು. ಅವರು ವಿದ್ಯೆಗೆ, ಕಲೆಗೆ, ಧಾರ್ಮಿಕ ವಿಷಯಗಳಿಗೆ ತುಂಬಾ ಪ್ರೋತ್ಸಾಹ ಕೊಟ್ಟು ಅದನ್ನು ಸಮೃದ್ಧಿಗೊಳಿಸಿ ಹಾಗೂ ಚಿರಂತನಗೊಳಿಸಿರುವುದಕ್ಕಾಗಿ ಕನ್ನಡ ನಾಡಿನ ಜನತೆ ಎಂದಿಗೂ ಅವರಿಗೆ ಚಿರಋಣಿ.

ಸರ್ವಜ್ಞನ ಕಾಲಘಟ್ಟದಲ್ಲಿ ರಾಜತತ್ವಕ್ಕೆ ಮೊದಲ ಮಣೆ ಸಲ್ಲುತ್ತಿದ್ದು, ಚಿಕ್ಕ ದೊಡ್ಡ ಸಾಮ್ರಾಜ್ಯಗಳು ವೈಭವಯುತವಾಗಿ ಮೆರೆಯುತ್ತಿದ್ದವು. ಸಾಮಾನ್ಯವಾಗಿ ಅರಸರ ಪ್ರಭುತ್ವ, ಅಧಿಕಾರ, ನಿರಂಕುಶವಾಗಿದ್ದಿತು. ರಾಜರ ದರ್ಬಾರ ಕಾರುಭಾರಗಳ ಇಷ್ಟಾನಿಷ್ಟಾ ಪರಿಣಾಮ ಅವರಿಗೆ ನೇರವಾಗಿ ಸಂಬಂಧಿಸಿದವರ ಮೇಲೆ ಹೆಚ್ಚಾಗಿ ಆಗುತ್ತಿದ್ದಿತಾದರೂ ಪರೋಕ್ಷವಾಗಿಯಾದರೂ ಅದರ ಜಳ ಜನಸಮುದಾಯಕ್ಕೆ ತಾಗದೇ ಬಿಡುತ್ತಿರಲಿಲ್ಲ. ಅವರ ದರ್ಪ, ದೌರ್ಜನ್ಯಗಳನ್ನು ಮೂಕ ಜನತೆ ಮೌನವಾಗಿಯೇ ಸಹಿಸಬೇಕಾಗಿತ್ತು. ಅಂತಹ ಪರಮಾವಧಿ ಅಧಿಕಾರ ಕೇಂದ್ರೀಕೃತವಾದ ರಾಜ್ಯಾಡಳಿತದ ವ್ಯವಸ್ಥೆ ಕುಸಿದು ಜನತಂತ್ರದ ವಿಕೇಂದ್ರೀಕೃತ ಆಡಳಿತ ಪದ್ಧತಿ ನಿಯಮ ಬಂದಿದೆ. ಆಡಳಿತದ ನಿತ್ಯ ಬದುಕಿನಲ್ಲಿ ಇಂತಹ ಪರಿಸ್ಥಿತಿ ಗಮನಕ್ಕೆ ಬಂದಿರಲೂಬಹುದು. ಅದಕ್ಕಾಗಿ ಸರ್ವಜ್ಞನ ವ್ಯಾವಹಾರಿಕವಾದ ಅನುಭವ ಅವನ ಚಿಂತನೆಗಳು ಕೆಲ ಮಟ್ಟಿಗೆ ಸರಿಯಾಗಿ ಇತ್ತು ಎಂದೆನಿಸುತ್ತದೆ.

ರಾಜ್ಯವೊಂದರ ಅಧಿಕಾರ ಸೂತ್ರಗಳನ್ನೆಲ್ಲಾ ಕೈವಶ ಮಾಡಿಕೊಂಡು ಅದನ್ನು ಸಮರ್ಥವಾಗಿ ತೂಗಿಸಿಕೊಂಡು ಜವಾಬ್ದಾರಿ ಹೊತ್ತ ರಾಜನೊಬ್ಬನ ಅಗತ್ಯ, ಆ ಕಾಲಘಟ್ಟದಲ್ಲಿ ಅನಿವಾರ್ಯವಾಗಿತ್ತು. ರಾಜನೇ ಇಲ್ಲದೆ ರಾಜ್ಯ ಅರಾಜಕತೆಗೆ ಈಡಾಗುತ್ತದೆ, ಈ ಸಂಗತಿ  ಅವನ ವಚನಗಳಲ್ಲಿ ಅಭಿವ್ಯಕ್ತಿ ಪಡೆದಿದೆ.

ಗುರುವು ಇಲ್ಲದ ಮಠವು ಹಿರಿಯರಿಲ್ಲದ ಮನೆಯು
ಅರಸಿಯಿಲ್ಲದೂರು ಇವು ಮೂರು ನುಲಿ ಹರಿದ
ಹೊರಸಿನಂತಕ್ಕು ಸರ್ವಜ್ಞ

ನಾಡೆಂಬ ದೇಹಕ್ಕೆ ರೂಢಿಪತಿಯೇ ಪ್ರಾಣ
ನಾಡಳಿಯ ರೂಢಪತಿ ಕೆಡಗು ಅರಸಳಿಯ
ನಾಡೆಲ್ಲ ಕೆಡಗು ಸರ್ವಜ್ಞ

ಅರಸನಿಲ್ಲದ ಊರು ಅರಾಜಕತೆಗೆ ಒಳಗಾಗುತ್ತದೆ. ಹಾಗಾಗಿ ಕವಿ ಬಳಸಿದ ಈ ವಚನಗಳೇ ಸಾಕ್ಷಿ. ಮಠದ ಗುರು ಹಾಗೂ ಮನೆಯ ಹಿರಿಯರು ಇಲ್ಲಿ ವ್ಯಕ್ತವಾಗುವ ಮಾರ್ಗದರ್ಶನ ಹಾಗೂ ಮಠ ಮನೆಯಂತಹ ಸಂಸ್ಥೆಗಳನ್ನು ತೂಗಿಸಿಕೊಂಡು ಹೋಗುವ ಜಾಣತನವನ್ನು ಹೇಳುತ್ತದೆ. ಇಲ್ಲಿ ಅರಸನ ಕರ್ಮ ಮತ್ತು ಕರ್ತವ್ಯಗಳನ್ನು ಬೆಳಗಬಲ್ಲ, ರಾಜನಿಲ್ಲದ ಊರಿಗೆ ಒದಗಬಹುದಾದ ಅಭದ್ರತೆ ಜನರ ರಕ್ಷಣೆಗೆ ರಾಜನ ಪ್ರಭುತ್ವ ಅನುಕೂಲಕರವಾಗಿರುತ್ತದೆ ಎಂಬ ಅಂಶ ಪ್ರಧಾನ ಪಾತ್ರವಹಿಸುತ್ತದೆ. ಹೀಗೆ ರಾಜ್ಯ ಎಂಬ ಕ್ಷೇಮಾಭಿವೃದ್ಧಿಯು ಹಿರಿಯರ ಹೊಣೆ ಹಾಗೂ ನಿರ್ವಹಣೆಯ ಜವಾಬ್ಧಾರಿ ರಾಜನನ್ನೇ ಅವಲಂಬಿಸಿದೆ ಎಂಬ ಆಶಯವಾಗಿದೆ. ರಾಜನಾದವನು ಗೊತ್ತು ಗುರಿಯನ್ನು ಸಾಧಿಸಬೇಕಿದ್ದಲ್ಲಿ ಉತ್ತಮ ಗುಣಗಳನ್ನು ಅಳವಡಿಸಿಕೊಂಡವನಾಗಿರಬೇಕು. ಎಂದು ಸರ್ವಜ್ಞನು ಚಿಂತನೆ ಮಾಡಿದ್ದಾನೆ.

ಪರನಾರಿ ಸೋದರರನು ವರಶತ್ರುದಲ್ಲಣನು
ಕರ ಪಾಪ ಭಯವ ಹೊರವ ಗುಣಿಯುಹ ನೃಪಗೆ
ಸ್ಥಿರವಿಹಳು ಲಕ್ಷ್ಮೀ ಸರ್ವಜ್ಞ

ಬಂಡಾರ ತುಂಬಿ ನೀ ಬಂಡಿಯಲಿ ಹೇರುವರೆ
ಮಂಡಲವನಾಳಿ ಮರೆಯುವರೆ ಒಕ್ಕಲನು
ಕೊಂಡಾಡಬೇಕು ಸರ್ವಜ್ಞ

ರಾಜನ ಅರ್ಹತೆಗೆ ಪರನಾರಿ ಸೋದರತೆ ಎಂಬ ಮಾತು ಅರ್ಥಪೂರ್ಣವಾಗಿದೆ. ಏಕೆಂದರೆ ಹೆಣ್ಣಿನ ಸಂಗದಿಂದ ಅನೇಕ ರಾಜರು, ಅರಸೊತ್ತಿಗೆಗಳು ನಾಶವಾಗಿದ್ದನ್ನು ಪುರಾಣ, ಇತಿಹಾಸ, ಸತ್ಯವೆಂದು ಸಾರುತ್ತವೆ. ಹೆಣ್ಣಿನ ಸಂಗ ರಾಜಧರ್ಮಕ್ಕೆ ಶೋಭೆ ತರುವಂತಹ ಕೆಲಸವಲ್ಲ, ಹಾಗಿದ್ದಾಗ ಮಾತ್ರ ಆತನ ರಾಜ್ಯ ನಿರ್ಭಯ ನೆಮ್ಮದಿಗಳಿಗೆ ನೆಲೆಮನೆಯಾಗಿ ರಾಜ್ಯದ ಕ್ಷೇಮಾಭಿವೃದ್ಧಿಗೆ ಅನುಕೂಲವಾಗುತ್ತದೆ. ಪಾಪ ಭಯ ಗುಣವಂತಿಕೆಗಳು ಆತನ ಜೀವವಾಗಿರಬೇಕು. ಹೀಗಿದ್ದಲ್ಲಿ ಆತನ ರಾಜ್ಯಲಕ್ಷ್ಮೀ ಸುಸ್ಥಿರವಾಗಿ ಅವನನ್ನೇ ಆಶ್ರಯ ಪಡೆದುಕೊಂಡಿರುತ್ತಾಳೆ. ಮತ್ತು

ಮುಂದುವರೆದು ಒಕ್ಕಲು ಮಕ್ಕಳು ಎಂಬುದನ್ನು ರಾಜ ಸದಾ ನೆನಪಿನಲ್ಲಿಡಬೇಕು. ಅವರಿಂದಲೇ ರಾಜ್ಯದ ಜನರಿಗೆಲ್ಲ ಬಾಳು ಬದುಕು ಸಾಧ್ಯ. ಹಾಗಿದ್ದಲ್ಲಿ ಮಾತ್ರ ಅರಸನ ಅರಸೊತ್ತಿಗೆ ಸರ್ವ ವಿಧದಿಂದಲೂ ಸುಖ–ಸಂತೃಪ್ತಿಯ ಆಗರವಾಗುತ್ತದೆ.

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಗಾದೆಯಂತೆ ಆತನ ದುರಾಚಾರವೇ ಅನಾಹುತಕ್ಕೆ ಕಾರಣವಾಗುತ್ತದೆ. ವಿನಾಶ ಕಾಲದಲ್ಲಿ ವಿಪರೀತ ಬುದ್ಧಿ ಎಂಬಂತೆ ದಾರಿ ತಪ್ಪಿದ ರಾಜನನ್ನು ಸರಿದಾರಿಗೆ ತರಲು ಅರಸನಿಗೆ ಒಳ್ಳೆಯ ಸಲಹೆ ಸೂಚನೆಯಿತ್ತು ರಾಜ್ಯದ ಹಿತ ರಕ್ಷಣೆ ಕಾಪಾಡುವುದು ಅಗತ್ಯ ಮಂತ್ರಿ ವರ್ಗ, ಕಾವಲು ಪಡೆ, ಆಡಳಿತ ವರ್ಗ ಮತ್ತು ಪರಿವಾರ ತಮ್ಮ ಕರ್ತವ್ಯಗಳನ್ನು ಬದಿಗೊತ್ತಿ ರಕ್ಷಣೆಗೆ ಮುಂದಾಗಬೇಕು ಎಂಬಲ್ಲಿ ಸರ್ವಜ್ಞ ಕವಿಯ ವಚನ ನೋಡಬಹುದು.

ಅರಸು ಕೊಲುವರೆ ಮಂತ್ರಿ ಕರೆಸಿ ಕಷ್ಟವ ಕೊಡಲು
ಬೆರಸಿ ತಳವಾರ ಬೀಳಲ್ಕೆ ಪರಿಹರಿಪ
ರಾರಿನ್ನು ಹೇಳು ಸರ್ವಜ್ಞ

ಪ್ರಜೆಗಳನ್ನು ರಕ್ಷಣೆ ಮಾಡುವ ರಾಜ ಜನರನ್ನು ಕೊಲ್ಲಲು ತೊಡಗಿದರೆ ರಾಜ್ಯದ ಸೂತ್ರದಾರ ಮಂತ್ರಿಯೇ ಕಿರುಕುಳ ನೀಡಿದರೆ ರಕ್ಷಣೆಗೆ ಬರಬೇಕಾದ ತಳವಾರನೇ ಅಕ್ರಮ ಮಾಡಿದರೆ ಜನರ ಗೋಳು ಕೇಳುವವರು ಯಾರು? ಎಂಬ ಮಾತನ್ನು ಕವಿ ಸರ್ವಜ್ಞ ತನ್ನ ವಚನದ ಮೂಲಕ ಅಭಿವ್ಯಕ್ತಗೊಳಿಸುತ್ತಾನೆ.

ಸರ್ವಜ್ಞ ದರ್ಪ–ದಬ್ಬಾಳಿಕೆಗಳನ್ನು ತೆರೆದ ಕಣ್ಣಿನಿಂದ ನೋಡಿ ಅನುಭವದ ಮಾತು ಹೇಳುತ್ತಾನೆ. ಮತ್ತು ಅವನ ಕಾಲಘಟ್ಟದಲ್ಲಿ ರಾಜಕೀಯ ಆಡಳಿತ ವ್ಯವಸ್ಥೆಯನ್ನು ರಾಜ ಪ್ರತಿನಿಧಿಯು ತನ್ನದೆ ಮಂತ್ರಿಮಂಡಲ ಹಾಗೂ ಆಸ್ಥಾನವನ್ನು ಹೊಂದಿರುತ್ತಿದ್ದನು. ಉದಾರ ದಾನಗಳನ್ನು ಮಾಡುತ್ತಿದ್ದ ಸಾಮಂತರು, ರಾಜ ಪ್ರತಿನಿಧಿಗಳು ತಮ್ಮ ಆಡಳಿತ ಕ್ಷೇತ್ರದಲ್ಲಿ ನಿರಂಕುಶಾಧಿಕಾರಿಯಂತೆ ಪಡೆದುಕೊಳ್ಳುತ್ತಿದ್ದರು. ಆದರೆ ಅವರು ಕೇಂದ್ರ ಸ್ಥಾನಕ್ಕೆ ಕಪ್ಪ ಕಾಣಿಕೆಗಳನ್ನು ತೆರಿಗೆಯನ್ನು ಕೊಡಬೇಕಾಗಿತ್ತು, ಮತ್ತು ಯುದ್ಧ ಕಾಲದಲ್ಲಿ ಸೇನೆಯನ್ನು ಒದಗಿಸಬೇಕಾಗಿತ್ತು. ರಾಜ ಪ್ರತಿನಿಧಿಗಳು ತಮ್ಮ ಆಡಳಿತ ಕ್ಷೇತ್ರದಲ್ಲಿ ಯಾವ ನಿರ್ಬಂಧವಿಲ್ಲದೆ ವರ್ತಿಸಬಹುದಾಗಿತ್ತು. ತಮ್ಮ ಚಕ್ರವರ್ತಿಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ತೊಡಗಿದವರು ಕ್ರೂರವಾದ ಶಿಕ್ಷೆಗೆ ಒಳಗಾಗುತ್ತಿದ್ದರು. ರಾಜನ ಅಧಿಕಾರವು ಅತಿ ಹೆಚ್ಚಿನದಾಗಿತ್ತು. ಅಧಿಕಾರಿಗಳು ಸ್ವತಂತ್ರವಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದರು.

ಗ್ರಾಮದ ಆಡಳಿತ ಚಿಕ್ಕ ಘಟಕವಾಗಿತ್ತು. ಗ್ರಾಮಾಧಿಕಾರಿಗಳು ಭೂಮಿಯನ್ನು ಪಡೆಯುವ ಅಥವಾ ನಿಗಧಿಯಾದ ಪ್ರಮಾಣದಲ್ಲಿ ರೈತರಿಂದ ದವಸ ಧಾನ್ಯಗಳನ್ನು ಸ್ವೀಕರಿಸುವ ರೀತಿಯಲ್ಲಿ ಸಂಬಳವನ್ನು ಸ್ವೀಕರಿಸುತ್ತಿದ್ದರು. ಗ್ರಾಮದಲ್ಲಿ ಶಾಂತಿ ಶಿಸ್ತು ಜಗಳಗಳನ್ನು ಬಗೆಹರಿಸುವುದು ಗ್ರಾಮಾಧಿಕಾರಿಗಳ ಮುಖ್ಯ ಕರ್ತವ್ಯಗಳಾಗಿದ್ದವು. ಜನರಿಂದ ಕಂದಾಯವನ್ನು ವಸೂಲಿ ಮಾಡುವುದು ಮತ್ತು ಗ್ರಾಮಗಳಲ್ಲಿ ಸರ್ಕಾರದ ಕಾನೂನನ್ನು ಕಾರ್ಯರೂಪಕ್ಕೆ ತರುವುದು ಗ್ರಾಮಮಂಡಳಿಯ ಇತರ ಕರ್ತವ್ಯಗಳಾಗಿದ್ದವು. ಈ ಗ್ರಾಮ ಪಂಚಾಯತಿಗಳು ಆಡಳಿತ ವ್ಯವಸ್ಥೆಯ ಬಹುಮುಖ್ಯ ಅಂಗಗಳಾಗಿದ್ದು ದಕ್ಷ ಹಾಗೂ ಉತ್ತಮ ಆಡಳಿತ ವ್ಯವಸ್ಥೆಯನ್ನು ಹೊಂದಲು ಸಹಕಾರಿಯಾಗಿದ್ದವು.

ಸರ್ವಜ್ಞನ ಈ ಜೀವನಾನುಭವ ಇಂದಿನ ಹೊಸ ಪರಿಸ್ಥಿತಿಯಲ್ಲು ಹೊಂದುವಂತಹದಾಗಿದೆ. ಇಂದು ರಾಜ ಮಹಾರಾಜರುಗಳು ಬ್ರಿಟೀಷರ ಸಾಮ್ರಾಜ್ಯಶಾಹಿ ಮಣ್ಣು ಮುಕ್ಕಿ ಹೋಗಿದ್ದರು ಸರಕಾರಿ ಕಛೇರಿ ಇನ್ನಿತರ ಸಂಘ–

ಸಂಸ್ಥೆಗಳಲ್ಲಿಯ ಅಧಿಕಾರಿ ವರ್ಗದ ದರಬಾರು, ಕಾರುಬಾರುಗಳೂ ಹಿಂದಿನ ಅರಸರ ಅಂದಾದುಂದಿ ಆಡಳಿತವನ್ನು ಅನುಕರಿಸುತ್ತವೆ. ಅವರೊಡನೆ ವ್ಯವಹರಿಸುವ ಅವರ ಕಾಲಡಿಯಲ್ಲಿ ಬಾಳಿ ಬದುಕುವ ಬಡಜೀವಿಗಳಿಗೆ ಈ ಅನುಭವದ ಮಾತು ಆದರೆ ಆಳುವವರ ಅನ್ಯಾಯ ಅನಾಚಾರಗಳನ್ನು ಸುಮ್ಮನೆ ಒಪ್ಪಿಕೊಳ್ಳುವುದೇ ಹಿತಕರವೆಂಬ ಇಲ್ಲಿಯ ಧ್ವನಿ ಸರ್ವಜ್ಞನ ಸಮಕಾಲೀನ ರಾಜಕೀಯ ಸ್ಥಿತಿಯಲ್ಲಿ ಸಂಗತವಾಗಿರಬಹುದಾದರೂ ಇಂದಿನ ಪರಿಸರದಲ್ಲಿ ಅದು ಅಸಂಗತ ಮಾತ್ರವಲ್ಲ ಅಪೇಕ್ಷಾರ್ಹವೂ ಅನ್ನಿಸದಿರದು. ಅಂದಷ್ಟಕ್ಕೆ ಸರ್ವಜ್ಞ ಈ ಕುರಿತು ಕುರುಡಾಗಿದ್ದನೆಂದು ಭಾವಿಸಕೂಡದು. ತನ್ನಂತೆ ಸತ್ಯನಿಷ್ಠೂರಿಗಳು ಬಾಯಿಬಡುಕರಲ್ಲದವರು ಆದ ವೀರ ಚೇತನಗಳ ಸ್ಥಿತಿಗತಿಯ ಕುರಿತು ಸರ್ವಜ್ಞ ಚಿಂತಿಸಿದ್ದಾನೆ. ಅಂಥವರ ಹಾದಿ ಮೊದಮೊದಲು ಮುಳ್ಳು ಕಲ್ಲುಗಳಿಂದ ತುಂಬಿದ ಕಷ್ಟದ ದಾರಿಯಾಗಿ ಕಂಡುಬರದಿರಬಹುದಾದರೂ ಕೊನೆಯಲ್ಲ ಅದು ಆತನ ಪಾಲಿಗೆ ಭಾಗ್ಯದ ಬಾಗಿಲು ತೆರೆಯುವಂಥದು ಆಗದಿರದು ಎಂದು ಹೇಳುತ್ತಾನೆ.

ಓಲಯ್ಸಿತಿರುವವನು ಮೇಲೆನಿಸುತ್ತಿದ್ದರೂ
ಸೋಲದ ಬುದ್ಧಿ ಇರುವನಲಿ ಭಾಗ್ಯದ
ಕೀಲು ಕಾಣಯ್ಯ ಸರ್ವಜ್ಞ ।

ಅರಸನನ್ನು ಮೇಲಾಧಿಕಾರಿಗಳನ್ನು ಮೆಚ್ಚಿಸುವಂತೆ ನಡೆಯುವವನಿಗೆ ನಟಿಸುವಂತವನಿಗೆ ತಾತ್ಕಾಲಿಕವಾಗಿ ಪ್ರಯೋಜನ ಉಂಟಾಗಬಹುದಾದರೂ ಕೊನೆಯಲ್ಲಿ ಮಾತ್ರ ಅದು ಅಪ್ರಯೋಜಕ ಮತ್ತು ಅನರ್ಥಕಾರಿಯೋ ಆಗುವ ಸಂಭವ ಇದೆ. ಇದಕ್ಕೆ ಪ್ರತಿಯಾಗಿ ಇಂತಹ ಸೋಗಲಾಡಿತನವನ್ನು ಕಷ್ಟ ನಷ್ಟಗಳನ್ನು ಎದುರಿಸುವ ಪ್ರಸಂಗ ಬರಬಹುದು. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಜೀವನ ಮೌಲ್ಯದ ರಹಸ್ಯ ಕಾಣಬಹುದು. ರಾಜಕೀಯ ಅಡಳಿತ ಹಾಗೂ ವ್ಯವಹಾರಕ್ಕೆ ಕವಿ ಸರ್ವಜ್ಞ ತನ್ನದೇ ಮಾತುಗಳಲ್ಲಿ ರಾಜಕೀಯ ಹಾಗೂ ರಾಜನೀತಿ ವ್ಯವಸಾಯ ಆಡಳಿತವನ್ನು ಸಮಗ್ರವಾಗಿ ತನ್ನ ವಚನಗಳಲ್ಲಿ ವಿವರಿಸುತ್ತಾನೆ.

**ಸರ್ವಜ್ಞನ ದೃಷ್ಟಿಯಲ್ಲಿ ರಾಜನೀತಿ :** "Administration" ಎಂಬ ಶಬ್ದಕ್ಕೆ ಕನ್ನಡ ಆಂಗ್ಲಭಾಷೆಯ ನಿಘಂಟಿನಲ್ಲಿ ಕಾರಭಾರ' ಕಾರ್ಯ ನಿರ್ವಹಣೆ ಎಂಬ ಅರ್ಥವಿದೆ.' ಇಲ್ಲಿ ಆಡಳಿತ ಅಂದರೆ ಈ ಅರ್ಥವನ್ನು ತೆಗೆದುಕೊಂಡರೆ ಯಾವುದರ ಕಾರ್ಯನಿರ್ವಹಣೆ? ಎಂಬ ಪ್ರಶ್ನೆ ಬಂದಾಗ ಇಲ್ಲಿ ದೇಶದ ಎಂಬ ಅಭಿಪ್ರಾಯ ಪಡಬೇಕು. ಪುರಾತನ ಅಥವಾ ಪ್ರಾಚೀನ ಕಾಲಕ್ಕೆ ನಾವು ಆಲೋಚನಾ ಲಹರಿ ಹರಿಬಿಟ್ಟು ಇತಿಹಾಸದ ಅವಲೋಕನ ಮಾಡಿದರೆ, ಅಲ್ಲಿ ಕಾಣುವ ಸಂಗತಿ ಆಗಿನ ಕಾಲದ ರಾಜ್ಯಕ್ಕೆ ದೇಶ ಎನ್ನುತ್ತಿದ್ದರು. ಅದನ್ನು ನೋಡಿಕೊಳ್ಳಲು ಅಂದರೆ ಅದರ ಆಡಳಿತ ನೆಡೆಸಲು ರಾಜನಿರುತ್ತಿದ್ದ. ರಾಜನು ರಾಜ್ಯ ಸುಭಿಕ್ಷವಾಗಿರಲು ಬೇಕಾದ ಎಲ್ಲ ರೀತಿಯ ಕಾರ್ಯವನ್ನು ಮಾಡಿಸುತ್ತಿದ್ದನು. ಶಾಸನ ಜಾರಿಗೆ ತಂದು ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ವಿಧಿಸಿ ಪ್ರಜೆಗಳಿಗೆ ನೆಮ್ಮದಿಯುಂಟಾಗುವಂತೆ ಆಡಳಿತ ನಡೆಸುತ್ತಿದ್ದನು. ರಾಜ್ಯದ ಎಲ್ಲ ಜವಾಬ್ದಾರಿಯು ಅವನ ಮೇಲಿರುತ್ತಿತ್ತು. ಹಾಗಾಗಿ ಧರಣಿಪತಿಯು, ಯೋಗ್ಯ ಮಂತ್ರಿ ಮಂಡಲವನ್ನು, ಅಧಿಕಾರಿಗಳನ್ನು, ನ್ಯಾಯಾಧೀಶರನ್ನು ನೇಮಿಸಿ ಆಡಳಿತ ನಿರ್ವಹಿಸುತ್ತಿದ್ದ. ಹಾಗಾದರೆ ಒಂದು ದೇಶದ ಸರ್ವ ಜವಾಬ್ದಾರಿಯನ್ನು ಕೈಯಲ್ಲಿಟ್ಟುಕೊಂಡು ಸೂತ್ರಧಾರಿಯಾಗಿ ಅಧಿಕಾರಯುತವಾಗಿ ಆಡಳಿತ ನಡೆಸುವ ರಾಜನು ಹೇಗಿರಬೇಕು? ಆತನ ಗುಣಗಳೇನು? ಆತನು ಹೇಗಿದ್ದಾಗ ಪ್ರಜಾವರ್ಗ, ಸುರಕ್ಷಿತವಾಗಿರಲು ಸಾಧ್ಯ. ರಾಜ್ಯ ರಕ್ಷಣೆ ಹೇಗೆ

ನಿರ್ವಹಿಸಬೇಕು? ಆತನ ಗುಣಗಳೇನು? ಎಂಬುದನ್ನು ತಿಳಿಯಲು ಸರ್ವಜ್ಞ ತನ್ನ ವಚನಗಳಲ್ಲಿ ರಾಜನೀತಿ ಕುರಿತು ತುಂಬಾ ವೈಚಾರಿಕವಾಗಿ ಚಿತ್ರಿಸಿದ್ದಾನೆ.

ರಾಜನೀತಿ (Politics) ಶಾಸ್ತ್ರವು ಮಾನವನ ನಡತೆ ನೈತಿಕ ಮಟ್ಟ ಮತ್ತು ಅವನ ಧ್ಯೇಯೋದ್ದೇಶಗಳನ್ನು ಅಭ್ಯಯಿಸಿಸುತ್ತದೆ. ಅದು ನೈತಿಕ ನಿಯಮ ಮತ್ತು ಜೀವನ ಮೌಲ್ಯಗಳನ್ನು ಶೋಧಿಸುತ್ತದೆ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಆಚಾರ, ಯಾವುದು ಅನಾಚಾರ, ಯಾವುದು ಸರಿ, ಯಾವುದು ತಪ್ಪು, ಯಾವುದು ನ್ಯಾಯ, ಯಾವುದು ಅನ್ಯಾಯ ಎಂಬುದನ್ನು ತಿಳಿಹೇಳಿ ಮನುಷ್ಯನಿಗೆ ಸನ್ಮಾರ್ಗದರ್ಶನ ನೀಡುತ್ತದೆ. ಅರಿಸ್ಟಾಟಲ್‌ನ ನೀತಿಶಾಸ್ತ್ರವನ್ನು ರಾಜ್ಯಶಾಸ್ತ್ರದ ಒಂದು ಭಾಗವೆಂದೇ ಪರಿಗಣಿಸಿದ್ದಾನೆ. ರಾಜಕೀಯ ಜೀವನಕ್ಕನುಗುಣವಾಗಿ ನೈತಿಕ ಜೀವನ ಮಾರ್ಪಾಡಾಗುವುದೆಂದು ಅವನ ವಾದ. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ ನೈತಿಕವಾಗಿ ಸರಿ ಅಲ್ಲದ್ದು ರಾಜಕೀಯವಾಗಿ ಸರಿಯಾಗಲಾರದು ಮೆಕೆವೆಲ್ಲಿ ಎಂಬ ರಾಜ್ಯಶಾಸ್ತ್ರಜ್ಞ ಬುದ್ಧಿವಂತ ದೊರೆ ಯಾರಲ್ಲು ವಿಶ್ವಾಸವಿಡಕೂಡದು ಎಂದು ಹೇಳಿದ್ದಾನೆ. ವಾಸ್ತವಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಂದರ್ಭಾನುಸಾರ ನೆಡೆಯುವುದೆ ಬುದ್ಧಿವಂತರ ಲಕ್ಷಣ ಎಂಬುದು ಅವನ ಅಭಿಪ್ರಾಯ. ಅವನ ರಾಜಕೀಯ ವಿಚಾರಧಾರೆ ನೀತಿ–ನಿರಪೇಕ್ಷ ರಾಜನೀತಿಗೆ ಜನ್ಮ ನೀಡಿತು.

ದುಷ್ಟನನ್ನು ಶಿಕ್ಷಿಸಿ ನಿರಪರಾಧಿಗಳಿಗೆ ರಕ್ಷಣೆ ನೀಡುವುದು ರಾಜನ ಕರ್ತವ್ಯ. ಶಿಕ್ಷೆಯನ್ನು ತನ್ನ ಸ್ವಂತ ಮಗನೇ ಆಗಿದ್ದರೂ ಅವನಿಗೆ ಶಿಕ್ಷೆ ವಿಧಿಸಲು ಹಿಂಜರಿಯಬಾರದು. ಹಾಗೆಯೇ ತನ್ನ ಶತ್ರುವಿನ ಮಗನೇನಾದರೂ ನಿರಪರಾಧಿಯಾಗಿದ್ದರೂ ಅವನನ್ನು ಶಿಕ್ಷಿಸಲು ಸಂಚು ಹೂಡಬಾರದು. ಇವು ನಿಷ್ಪಕ್ಷಪಾತಿಯಾದ ರಾಜನ ಲಕ್ಷಣಗಳು. ಧರ್ಮಿಷ್ಟರಾಜ ದೇಶವನ್ನು ಆಳುತ್ತಿದ್ದರೆ ಪ್ರಜೆಗಳು ಸಂತೋಷದಿಂದಿರುತ್ತಾರೆ. ಅಧರ್ಮಿ ರಾಜನಾದರೆ ಪ್ರಜೆಗಳು ದುಃಖಿಗಳಾಗಿರುತ್ತಾರೆ. ಪ್ರಜಾಪ್ರಭುತ್ವಕ್ಕಿಂತ ರಾಜ್ಯಾಧಿಪತ್ಯವೇ ಮೇಲು, ಏಕೆಂದರೆ ರಾಜ್ಯಾಧಿಪತ್ಯವು ಬಲಿಷ್ಠವಾಗಿರುತ್ತದೆ.

ಸರ್ವಜ್ಞ ಯಾವುದೇ ವಿಷಯಗಳನ್ನು ಕುರಿತು ನೀತಿ ಬೋಧಿಸಿದರೂ ಅದಕ್ಕೆ ಅವನದೇ ಆದ ಒಂದು ಪರಿಮಿತಿ ಇದೆ. ತನ್ನ ಅನುಭವಕ್ಕೆ ಓದಿನಿಂದ ಬಂದಿರಬಹುದು, ಪ್ರತ್ಯಕ್ಷ ನೋಡಿ ಬಂದಿರಬಹುದು. ಸರ್ವಜ್ಞ 'ರಾಜನೀತಿ' ಚಿಂತನೆಗೆ ಅವನ ಕಾಲದ ರಾಜಕೀಯ ಆಡಳಿತ ಅದರ ಸ್ಥಿತ್ಯಂತರ ಹಾಗೂ ರಾಜನ ನಡತೆ ಅವನ ಧರ್ಮ ಗುಣ ಇತ್ಯಾದಿ ಅನುಭವಿಸಿ ಇಲ್ಲಿ ತನ್ನ ನೀತಿ ಮಾರ್ಗದರ್ಶನ ಮಾಡಿರಬಹುದೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಇದಕ್ಕೆ ಕಾರಣ ಆತ ಬದುಕಿದ ಕಾಲಮಾನವು ಆಗಿರಬಹುದು. 'ರಾಜ್ಯವೊಂದರ ಅಧಿಕಾರ ಸೂತ್ರಗಳನ್ನೆಲ್ಲ ಕೈವಶವಾಗಿಟ್ಟುಕೊಂಡು, ಅದನ್ನು ತೂಗಿಸಿಕೊಂಡು ಹೋಗುವಂತಹ ಸರ್ವ ಜವಾಬ್ದಾರಿ ಹೊತ್ತ ರಾಜನೊಬ್ಬನ ಅಗತ್ಯ ಅಂದು ಅನಿವಾರ್ಯವಾಗಿದ್ದಿತು. ರಾಜನೇ ಇಲ್ಲದೆ ಒಂದು ರಾಜ್ಯ, ಅರಾಜಕತೆಗೆ ಈಡಾಗದೇ ಬದುಕಿಬಾಳುವುದು ಸಾಧ್ಯವೆಂಬ ಕಲ್ಪನೆಯೇ ಅಂದು ಊಹಿಸಲೂ ಅಸಾಧ್ಯವಾಗಿದ್ದಿತು.

ಗುರುವು ಇಲ್ಲದ ಮಠವು । ಹಿರಿಯರಿಲ್ಲದ ಮನೆಯು ।
ಅರಸಿಲ್ಲದೂರು ಇವು ಮೂರುನುಲಿಹರಿದ ।
ಹೊರಸಿನಂತಿಕ್ಕು ಸರ್ವಜ್ಞ

ಹಿರಿಯರಿಲ್ಲದ ಮನೆಯು । ಗುರುವು ಇಲ್ಲದ ಮಠವು ।
ಅರಸುತನ ವಳಿದ ಅರಮನೆಯು ಹಣ ಹೋದ ।
ಹರದನಂತಕ್ಕು ಸರ್ವಜ್ಞ

ನಾಡೆಂಬ ದೇಹಕ್ಕೆ । ರೂಢಿಪತಿಯೇ ಪ್ರಾಣ ।
ನಾಡಳಿಯೆ ರೂಢಿಪತಿ ಕೆಡಗು, ಅರಸಳಿಯೆ ।
ನಾಡೆಲ್ಲ ಕೆಡಗು ಸರ್ವಜ್ಞ

ಒಂದು ನಾಡಿಗೆ ರಾಜನ ಅನಿವಾರ್ಯತೆಯನ್ನು ಈ ಮೇಲ್ಕಂಡಂತೆ ಸೂಚಿಸುತ್ತಾನೆ. ಗುರುವಿಲ್ಲದ ಮಠದಂತೆ, ಹಿರಿಯರಿಲ್ಲದ ಮನೆಯಂತೆ, ನುಲಿ ಹರಿದ ಹೊರಸಿನಂತೆ, ಹಣ ಕಳೆದುಕೊಂಡ ವ್ಯಾಪಾರಿಯಂತೆ ಆಗುತ್ತದೆಂದು ವಿಸ್ತರಿಸುತ್ತಾನೆ. ಅಷ್ಟೆ ಅಲ್ಲದೆ ನಾಡೆಂಬ ದೇಹಕ್ಕೆ ರೂಢಿಪತಿಯೇ ಪ್ರಾಣವೆಂಬಂತೆ ರಾಜನ ಅನಿವಾರ್ಯತೆಯನ್ನು ಬಣ್ಣಿಸುತ್ತಾನೆ. ರಾಜ ಪ್ರತ್ಯಕ್ಷ ದೇವನಂತೆ ಎಂಬ ಮಾತು ಪ್ರಾಚೀನ ಕಾಲದಲ್ಲಿ ಅಕ್ಷರಶಃ ಸತ್ಯವಾಗಿದ್ದಿತು. ರಾಜನೆಂದರೆ ಒಂದು ದೇಶದ ಆಡಳಿತ ಸೂತ್ರ ಹಿಡಿದ ವ್ಯಕ್ತಿ. ದುಷ್ಟರ ದಮನಕ್ಕೆ ರಾಜನೆಂಬುವನು ಇಲ್ಲದಿದ್ದರೆ ಪ್ರಜಾರಕ್ಷಣೆಯು ಸಾಧ್ಯವಿಲ್ಲ. ರಾಜ ಒಬ್ಬ ರಥಿಕ, ರಾಜ್ಯವೇ ರಥ. ಪ್ರಜೆಗಳೇ ಕುದುರೆಗಳು. ಆ ಕುದುರೆ ಎಲ್ಲೆಂದರಲ್ಲಿ ಮೀರಿ ಓಡದಂತೆ ತಡೆಯಲು ರಾಜನು ಬೇಕೆ ಬೇಕು. ಎಂದು ಯಜ್ಞವಲ್ಕ್ಯನ ಸ್ಮೃತಿಯಲ್ಲಿ ಹೇಳಲಾಗಿದೆ. ಅರಸನಿಲ್ಲದ ಊರು ಅರಾಜಕತೆಗೆ ಈಡಾಗದಿರದು ಎಂಬ ಆಶಯದ ಆವಿಷ್ಕಾರಕ್ಕಾಗಿ ಸರ್ವಜ್ಞ ಬಳಸಿರುವ ಒಂದೊಂದು ದೃಷ್ಟಾಂತಗಳೂ ಬಹು ಅರ್ಥಪೂರ್ಣವಾಗಿವೆ. ಮಠದ ಗುರು' ಹಾಗೂ 'ಮನೆಯ ಹಿರಿಯ ಈ ದೃಷ್ಟಾಂತಗಳು ವಿವೇಕಯುತ ಮಾರ್ಗದರ್ಶನ ಹಾಗೂ ಮನೆ–ಮಠದಂತಹ ಸಂಸ್ಥೆಗಳನ್ನು ನಿಭಾಯಿಸಲು ಬೇಕಾಗುವ ಅಗತ್ಯತೆಯನ್ನು ಧ್ವನಿಸುತ್ತವೆ.

ಅರಸನ ಕರ್ತವ್ಯವೆಂಬುದು ಎಷ್ಟು ಅಗತ್ಯ ಹಾಗೂ ಆ ನಾಡಿಗೊದಗುವ ಅಪಾಯದ ಸಂಕೇತವನ್ನು ನುಲಿ ಹರಿದ ಹೊರಸು ಎಂಬ ಔಚಿತ್ಯಪೂರ್ಣವಾದ ಅರ್ಥವನ್ನು ಸೂಚಿಸುತ್ತದೆ. ಮುಂದಿನ ವಚನದಲ್ಲಿ 'ಹಣ ಹೋದ ಹರದ' ಯಾವುದೇ ವ್ಯವಹಾರ ವ್ಯಾಪಾರಕ್ಕೆ ಹಣವೆಂಬುದು ಎಷ್ಟು ಅನಿವಾರ್ಯವೋ ಹಾಗೆ ಹಣವಿಲ್ಲದ ವ್ಯಾಪಾರಿ ತನ್ನ ಅಸ್ಥಿತ್ವವನ್ನೆ ಕಳೆದುಕೊಳ್ಳುತ್ತಾನೆ. ನಷ್ಟ ಅನುಭವಿಸಿ ಕಂಗಾಲಾಗುತ್ತಾನೆ. ಇಲ್ಲಿ ವ್ಯಾಪಾರಕ್ಕೆ ಹಣ ಎಷ್ಟು ಮುಖ್ಯವೋ ಅಷ್ಟೇ ರಾಜನ ಅವಶ್ಯಕತೆ ಇರುವುದನ್ನು ಮನಗಾಣಿಸುತ್ತಾನೆ. ಇನ್ನೊಂದು ವಚನದಲ್ಲಿ ನಾಡು ಮತ್ತು ರೂಢಿಪತಿಗೆ ಇರುವ ಸಂಬಂಧವನ್ನು ನಾಡೆಂಬ ದೇಹಕ್ಕೆ ರೂಡಿಪತಿಯೇ ಪ್ರಾಣ ಎಂಬ ರೂಪಕದ ಮುಖಾಂತರ ದೇಹವೇ ಇಲ್ಲದಿದ್ದಾಗ ಪ್ರಾಣವಿರಲು ಹೇಗೆ ಸಾಧ್ಯ? ಎಂಬ ಅರಸನ ಅನಿವಾರ್ಯತೆಯ ಅಗತ್ಯತೆಯನ್ನು ರೂಪಿಸಿದ ಪರಿಯಂತೂ ಅವನಿಲ್ಲದ ನಾಡು ಕೇಡು ಎಂಬ ಭಾವಾರ್ಥವನ್ನು ಅದರ ಜೊತೆಗೆ ಒಂದು ನಾಡಿನ ಜವಾಬ್ದಾರಿ ರಾಜನನ್ನೇ ಅವಲಂಬಿಸಿದೇ ಎಂಬ ಆಶಯ ವ್ಯಕ್ತವಾಗಿರುವುದನ್ನು ಮನಗಾಣಹುದು.

ದೊರೆತನ ಮಾಡುವರು । ಕರೆದನ್ನ ನೀಡುವರು ।
ಉರಗ ಭೂಷಣನ ನೆನೆವವರು, ಧರೆಯೊಳಗೆ ।
ನರರಲ್ಲ ನೋಡ ಸರ್ವಜ್ಞ,

ದೇವರು ಕಾಣದ ದೈವ. ರಾಜ ಪ್ರತ್ಯಕ್ಷ ದೈವ, ಭೂಮಂಡಲದ ಮಾನವರಿಗೆ ರಾಜನು ಶಿವಸ್ವರೂಪಿಯಾಗಿ, ಹಸಿದವರಿಗೆ ಹಸಿವನ್ನು ನೀಗಿಸುವ ಅನ್ನದಾತನಾಗಿ ತೋರ್ಪಡುತ್ತಾನೆ. ಮಾನವರಿಗೆ ಕಷ್ಟಕಾಲ ಬಂದಾಗ ತಮ್ಮ ಇಷ್ಟದೈವವನ್ನು ಸ್ಮರಣೆ ಮಡುವಂತೆ ರಾಜನನ್ನು ಸ್ಮರಿಸುತ್ತಾರೆ. ಅವರ ಪಾಲಿಗೆ ಅವನೆ ಇಷ್ಟದೈವವಾಗಿ ಕಾಣುತ್ತಾನೆ. ಇಲ್ಲಿ 'ಉರಗ ಭೂಷಣ' ಎಂಬ ವಿಶೇಷಣ ರಾಜನನ್ನು ದೈವತ್ವಕ್ಕೆ ಏರಿಸಿದಂತಿದೆ. ಅಂತಹ ಪರಮ ಪದವಿಯನ್ನು ಕೊಟ್ಟು

ಗೌರವಿಸಿ ಹಣೆಮಣೆಯುತ್ತಾರೆಂಬ ಭಾವನತ್ಮಕ ಸಂಬಂಧವನ್ನು ರಾಜನಿಗೆ ನೀಡಿರುವುದು ಪ್ರಜೆಗಳ ಸಂಕಷ್ಟ ಪರಿಹರಿಸುವಲ್ಲಿ ರಾಜ 'ಪ್ರತ್ಯಕ್ಷ ದೇವ' ನಾಗಿ ಭೂನಾಥನಾಗಿ ಕಂಗೊಳಿಸಿ ಜನರ ಮನಸ್ಸಿನಲ್ಲಿ ರಾಜನ ಬಗ್ಗೆ ಅಧ್ಯಾತ್ಮದ ನೆಲೆ ಕಾಣುವಂತೆ ಸರ್ವಜ್ಞ ತನ್ನ ವಚನಗಳಲ್ಲಿ ವ್ಯಕ್ತಪಡಿಸುತ್ತಾನೆ.

**ಯೋಗ್ಯ–ರಾಜಲಕ್ಷಣ :** ನಾಯಕತ್ವಕ್ಕೆ ತನ್ನದೇ ಆದ ಕೆಲವು ಲಕ್ಷಣಗಳಿರುತ್ತವೆ. ಒಂದು ನಾಡಿನ ರಾಜ್ಯಾಧಿಕಾರ ಪಡೆದ ರಾಜನಿಗೆ ಯೋಗ್ಯವಾದ ಕೆಲವು ಲಕ್ಷಣಗಳಿರಬೇಕಾಗುತ್ತದೆ. ಅಂಥ ಯೋಗ್ಯ ರಾಜನು ಹೊಂದಿರಬೇಕಾದ ರಾಜ ಲಕ್ಷಣಗಳನ್ನು ಸರ್ವಜ್ಞ ತನ್ನ ವಚನಗಳಲ್ಲಿ ನೀರೂಪಿಸಿದ ರೀತಿ ಬಹು ಅರ್ಥವಂತಿಕೆಯಿಂದ ಕೂಡಿದೆ.

ಊರಿಂಗೆ ದೊರೆ ರೂಪು । ನಾರಿಂಗೆ ಗುಣ ರೂಪು ।
ಚಾರು ಕೋಕಿಲೆಗೆ ಸ್ವರ ರೂಪು, ರಾಜಂಗೆ ।
ಧೀರತ್ವ ರೂಪ ಸರ್ವಜ್ಞ

ಹರಗೆ ನಂದಿಯು ಲೇಸು । ಮರಣ ಭೂತಕ ಲೇಸು ।
ವರಯುದ್ದ ಲೇಸು ಸುಭಟಂಗೆ, ರಾಜಂಗೆ ।
ಕರಧೈರ್ಯ ಲೇಸು ಸರ್ವಜ್ಞ

ಯಾವುದೇ ಒಂದು ವಸ್ತುವಿಗೆ ವ್ಯಕ್ತಿಗೆ ಸೌಂದರ್ಯ ಬರುವಂತಿದ್ದರೆ ಅದಕ್ಕೆ ಮಿಗಿಲಾದ ಇನ್ನೊಂದು ವಿಶೇಷಣ ಸೇರಿದಾಗಲೆ ಅದಕ್ಕೆ ನಿಜವಾದ ಕಳೆ ಬರುತ್ತದೆ. ಒಂದು ನಾಡಿನ ಕೀರ್ತಿ ಹೆಚ್ಚಬೇಕು ಅದು ಪ್ರಸಿದ್ಧಿ ಪಡೆಯಬೇಕು ಎಂದರೆ ಅದನ್ನು ಆಳುವ ದೊರೆ ಕಾರಣನಾಗುತ್ತಾನೆ. ನಾರಿ ತನ್ನ ಗುಣದಿಂದ, ಕೋಗಿಲೆ ಕಪ್ಪಾಗಿದ್ದರೂ ಅದರ ಸ್ವರದಿಂದ ಪ್ರಸಿದ್ಧಿ ಪಡೆಯುವುದು. ರಾಜನು ತನ್ನ ಶೂರತನ ಪರಾಕ್ರಮಗಳಿಂದ ಪ್ರಸಿದ್ಧಿ ಪಡೆಯುತ್ತಾನೆ. ಹಾಗೆಯೇ ಮುಂದಿನ ವಚನದಲ್ಲಿ ಶಿವನಿಗೆ ನಂದಿ(ಬಸವಣ್ಣ) ಬಂಡನಾದವನಿಗೆ, ನಾಚಿಕೆ ಇಲ್ಲದವನಿಗೆ ಮರಣವೇ ಲೇಸು. ವೀರಯೋಧನಿಗೆ ಒಲಿದು ಬಂದ ಯುದ್ಧವೇ ಲೇಸು. ಹಾಗೆಯೇ ರಾಜನಾದವನಿಗೆ ಕಿರಣದಂತೆ ಹೊಳೆಯುವ ಸಾಹಸ ಹಾಗೂ ಧೈರ್ಯವೇ ಲೇಸು. ರಾಜನಿಗೆ ಪರಾಕ್ರಮ ಧೈರ್ಯ, ಕೀರ್ತಿಯೇ ಅವನಿಗೆ ಯಶಸ್ಸೆಂದು ವರ್ಣಿಸುತ್ತಾನೆ.

**ಸಾವಿಗೆ ಅಂಜದವ :** ನಿಜವಾದ ವೀರರು ಸಾವು ಭೀತಿಗಳಿಗಂಜುವರೇ? ಯುದ್ಧದಲ್ಲಿ ರಣಹೇಡಿಯಾಗಿ ವೈರಿಗೆ ಬೆನ್ನು ತೋರಿಸುವುದಕ್ಕಿಂತ 'ಜಾತಸ್ಯಮರಣಂ ದ್ರುವಂ' ಸಾಯುವುದೇ ಲೇಸು ಎಂದು ಪರಾಕ್ರಮಿಗಳಾಗಿ ಹೋರಾಡುತ್ತಾರೆ, ವಿನಹ ಹೆದರಿ ಹಿಂದೆ ಸರಿಯುವುದಿಲ್ಲ. ರಾಜನಾದವನು ವೈರಿಗಳಿಗೆ ಸಾವಿಗೆ ಹೆದರುವನೇ?

ಜಾತಿವೀರರು ಸಾವ । ಭೀತಿಗಂಜುಳಿವರೇ ? ।
ಜಾಸತ್ಯಮರಣಂ ಧ್ರುವ ಮೆಂದು ಇರುತಿರಲು ।
ಏತಕಂಜುವದು? ಸರ್ವಜ್ಞ

ಬಲೆಯು ಹರಿದರೆ ಹೊಲ್ಲ । ಮೊಲೆಯು ಬಿದ್ದರೆ ಹೊಲ್ಲ ।
ತಲೆಹೊಲ್ಲ ಮೂಗು ಹರಿದರೆ, ಕಲಿಗೆ ಮೂ ।
ದಲೆಯ ನುಡಿ ಹೊಲ್ಲ ಸರ್ವಜ್ಞ

ನೀರಿನಲ್ಲಿ ಹರಿದ ಬಲೆಯನ್ನು ಹೂಡಿದರೆ ಮೀನು ಬಲೆಗೆ ಬೀಳಲು ಸಾಧ್ಯವೆ. ಸೂಳೆಗೆ ಯೌವನವೇ ಆಕೆಯ ಸಂಪತ್ತು. ಅಂತಹ ಯೌವನ(ಮೊಲೆಯು)ಅಳಿದ ಮೇಲೆ ಯಾರು ತಾನೆ ಬಯಸುತ್ತಾರೆ, ಮೂಗೂ ಇಲ್ಲದ ತಲೆ ಇದ್ದರೇನು, ವೀರನಾದವನಿಗೆ ಮೂದಲಿಕೆಯ (ತೆಗಳಿಕೆಯ) ಮಾತು ಸಲ್ಲುವುದಿಲ್ಲ. ಅದನ್ನು ಎಂದೂ ಸಹಿಸಲಾರನು. ಅಪ್ರಿಯವಾದ ಹಿತವನ್ನು ರಾಜ ಎಂದೂ ಬಯಸಲಾರ ಎನ್ನುತ್ತದೆ ಸರ್ವಜ್ಞ ಪ್ರಜ್ಞೆ.

**ಧನುರ್ವಿದ್ಯೆ ಬಲ್ಲವನು :** ರಾಜನಾದವನು ಸರ್ವ ವಿದ್ಯೆಯ ಜೊತೆಗೆ ಧನುರ್ವಿದ್ಯೆ ಬಲ್ಲಿದನಾದರೆ ಅದು ಅವನಿಗೆ ಪರಮ ಕೀರ್ತಿಯನ್ನು ತಂದು ಕೊಡುತ್ತದೆ. ಶಸ್ತ್ರವಿಲ್ಲದ ಬಿಲ್ಲು ಹುಲ್ಲಿಗಿಂತಲೂ ಕಡೆ (ಕೀಳು) ಶಸ್ತ್ರಾಸ್ತ್ರ ಬಲ್ಲ ರಾಜ ಈ ಜಗದಲ್ಲಿ ಎಲ್ಲವನ್ನೂ ಗೆಲ್ಲಬಹುದು. ಅಂತಹ ಬಿಲ್ಲಿನಿಂದಲೇ ಅರ್ಜುನ ಶ್ರೀರಾಮಚಂದ್ರ ವೈರಿಗಳನ್ನು ಧ್ವಂಸಮಾಡಿ ಎಲ್ಲವನ್ನೂ ಗೆದ್ದು ಈ ಲೋಕದಲ್ಲಿ ಅಜರಾಮರರಾದರು. ರಾಜನಾದವನಿಗೆ ಅದು ಭೂಷಣ ಹಾಗೂ ಅವನ ವೀರತನದ ಸಂಕೇತ.

ಬಿಲ್ಲಿಲ್ಲದಾ ಕೆಯ್ದು । ಹುಲ್ಲಿಂದ ಕಡು ಕಷ್ಟ ।
ಬಿಲ್ಲಿಲರ್ಜುನನು ರಘುರಾಮ ರೀಜಗದಿ ।
ಎಲ್ಲ ಗೆಲಿದಿಹರು ಸರ್ವಜ್ಞ

ಕತ್ತಿಯನು ಪಿಡಿಯುವಡೆ । ಶಕ್ತಿ ತುಂಬಿರಬೇಕು ।
ಶತ್ರು ತಾ ಸುತ್ತಮುತ್ತಿ ಬರೆ ಕತ್ತಿಯಿಂ।
ನೆತ್ತಿ ಹೊಯ್ಯೆಂದ ಸರ್ವಜ್ಞ

ಕತ್ತಿಯನು ಧರಿಸಿದಗೆ । ಯುಕ್ತಿಯೊಂದಿರಬೇಕು ।
ಕುತ್ತುಗಳು ಬಿಡದೆ ಬರುತಿರಲು ಕತ್ತಿಯ ।
ನೆತ್ತಿ ಹೊಯ್ಯೆಂದ ಸರ್ವಜ್ಞ

ರಾಜನಾದವನು ವೀರನಾಗಿ ಕತ್ತಿ ಹಿಡಿದು ಶೌರ್ಯ ಸಾಹಸವಿದ್ದರಷ್ಟೇ ಸಾಲದು ಅದರೊಂದಿಗೆ ಯುಕ್ತಿಯೂ ಬೇಕಾಗುತ್ತದೆ. ಸಮರ ಶೂರರಾದ ಶತ್ರುಗಳು ಸುತ್ತುವರಿದು ಬಂದಾಗ ಕತ್ತಿ ಮಾಡದ ಕೆಲಸವನ್ನು ರಾಜ ಯುಕ್ತಿಯಿಂದ ಮಾಡಬೇಕಾಗುವುದು. 'ಶಕ್ತಿಗಿಂತ ಯುಕ್ತಿ ಮೇಲು' ಯುದ್ದ ಮಾಡಿ ಗೆಲಲಾಗದ್ದನ್ನು ಬುದ್ಧಿಯಿಂದ ಗೆಲ್ಲುವವನೇ ನಿಜವಾದ ರಾಜನೆನಿಸುತ್ತಾನೆ. ಇಡೀ ನಾಡಿನ ಜನರು ಅವನ ಬುದ್ದಿವಂತಿಕೆಯನ್ನು ಕೊಂಡಾಡಿ ರಾಜನ ಕೀರ್ತಿಯನ್ನು ಅಜರಾಮರಗೊಳಿಸುತ್ತಾರೆ. ನಾಯಕನಾದವನಿಗೆ ಆಪತ್ತು ಶತ್ರುಪಡೆಯ ಉಪಟಳ ಮೇಲಿಂದ ಮೇಲೆ ಮುತ್ತಿಕ್ಕಿ ಬರುವುದು ಸಾಮಾನ್ಯ. ಅಂತಹ ಕಷ್ಟಗಳು ಬಂದಾಗ ತನ್ನ ಯುಕ್ತಿಯಿಂದಲೇ ಪರಿಹರಿಸುವ ಚಾಕಚಕ್ಯತೆ ಇರಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

**ಬೇಟೆ ಬಲ್ಲವನು :** ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳಿರುವಂತೆ ರಾಜನಾದವನು ವಿನೀತನೂ, ಸತ್ಯಸಂಪನ್ನನು, ಕುಲೀನನೂ, ಸತ್ಯವಂತನೂ, ಶುಚಿಯುಳ್ಳವನೂ, ಮಹಾನುಭಾವಿಯೂ ಗೌಪ್ಯವಾಗಿಡಬೇಕೆಂಬುದನ್ನು ತಿಳಿದವನೂ ಆಗಿರಬೇಕು. ಅದರೊಂದಿಗೆ ಸುಜನರೊಡನೆ ಒಡನಾಟವೂ ಅವನಿಗೆ ಅತ್ಯಗತ್ಯ. ಕದನಕ್ಕೆ ಕೋಟೆ ರಕ್ಷಣೆ ನೀಡುವಂತೆ, ಹೆಣ್ಣಿಗೆ

ಪಾತಿವ್ರತ್ಯ ಹಾಗೂ ಚಾರಿತ್ರ್ಯ ಶೋಭೆ ತರುವಂತೆ ಅರಸನಾದವನಿಗೆ ಸಜ್ಜನರ ಒಡನಾಟವೂ ಸೌಖ್ಯ ತರುತ್ತದೆ. ಸರ್ವಜ್ಞನೇ ಹೇಳಿರುವಂತೆ 'ಸಜ್ಜನರ ಒಡನಾಟ ಹೆಜ್ಜೇನು ಸವಿದಂತೆ' ಹಾಗೆಯೇ ಸದಾ ಸಜ್ಜನರ ಒಡನಾಟದಿಂದಿರಬೇಕು, ಅದರಿಂದ ಒಳ್ಳೆಯ ಮಾರ್ಗದರ್ಶನವೂ ಸನ್ಮಾರ್ಗವೂ ದೊರೆಯುತ್ತದೆ ಎಂಬ ಆಶಯವಡಗಿದೆ.

ಕೋಟೆ ಕದನಕೆ ಲೇಸು । ಬೇಟೆಯರಸಿಗೆ ಲೇಸು ।
ನೀಟಾದ ಹೆಣ್ಣು ತರ ಲೇಸು, ಸುಜನರೊಡ ।
ನಾಟವೇ ಲೇಸು ಸರ್ವಜ್ಞ

**ಸಲಿಗೆ ಕೊಡದವನು :** ಒಂದು ರಾಜ್ಯದ ಎಲ್ಲ ಅಧಿಕಾರವನ್ನು ತನ್ನ ಕೈವಶವಾಗಿಟ್ಟುಕೊಂಡ ರಾಜನು ಎಂತಹ ಸ್ವಭಾವವನ್ನು ಹೊಂದಿರಬೇಕು ಎಂಬ ವಿಚಾರವನ್ನು ಹೇಳುವಲ್ಲಿ ಪ್ರಕೃತಿ ಸಹಜವಾದ ಕೆಲವು ಕೆಡುಕುಗಳು ರಾಜನಿಗೆ ಅನ್ವಯಿಸುತ್ತವೆ.

ಮರವು ಮಗುವಿಗೆ ಹೊಲ್ಲ । ಕುರುವು ಕುಂಡೆಗೆ ಹೊಲ್ಲ ।
ಕುರುಡನ ಕೋಲು ಕಳ ಹೊಲ್ಲ, ದೊರೆಗಳಿಗೆ ।
ನೆರೆಮಾತು ಹೊಲ್ಲ ಸರ್ವಜ್ಞ

ನೆತ್ತವಿತ್ತಕೆ ಬಲವು । ಒತ್ತೆ ಸೂಳೆಗೆ ಬಲವು ।
ಕತ್ತಲೆಯು ಬಲವು ಕಳ್ಳಂಗೆ, ಅರಸಿಂಗೆ ।
ಸತ್ಯವೇ ಬಲವು ಸರ್ವಜ್ಞ.

ಪರನಾರಿ ಸೋದರನು । ವರಶತ್ರುದಲ್ಲಣನು ।
ಕರ ಪಾಪ ಭಯವ ಹೊರೆವ ಗುಣಿಯಹ ನೃಪಗೆ ।
ಸ್ಥಿರವಿಹಳು ಲಕ್ಷ್ಮೀ ಸರ್ವಜ್ಞ

ಕುಂಡೆಯ ಮೇಲೆ ಕುರುವಾದಾಗ ಅದರ ನೋವನ್ನು ಸಹಿಸಲು ಅಸಾಧ್ಯ, ಕುರುಡನಾದವನಿಗೆ ತನ್ನ ಊರುಗೋಲೇ ಅವನಿಗೆ ದಾರಿದೀಪವಾಗಿರುತ್ತದೆ. ಆ ಕೋಲನ್ನು ಕಳೆದುಕೊಂಡ ಕುರುಡ ನಡೆದಾಡುವುದು ಅಸಾಧ್ಯವಾದ ಮಾತು. ದೊರೆಯಾದವನಿಗೆ ನಿಂದನೆಯ ಮಾತು ಚುಚ್ಚು ಮಾತುಗಳು ಶ್ರೇಷ್ಠವಲ್ಲ. ಅಂತಹ ಮಾತುಗಳನ್ನು ರಾಜನಾದವನು ನಂಬಬಾರದು ಎಂಬ ಆಶಯ ಈ ವಚನದಲ್ಲಿದೆ. ಹಾಗೆಯೇ ಪಗಡೆಯಾಡಲು ಅವನ ಸಂಪತ್ತೇ ಅವನಿಗೆ ಬಲವನ್ನು ತಂದುಕೊಡುತ್ತದೆ, ಸೂಳೆಯಾದವಳಿಗೆ ವಿಟನು ತಂದುಕೊಡುವ ಸಂಪತ್ತು ಬಲ ತರುತ್ತದೆ. ಕಳವು ಮಾಡುವ ದುರ್ಜನರಿಗೆ ಕತ್ತಲೆಯು ಬಲವನ್ನು ನೀಡುತ್ತದೆ ಹಾಗೆಯೇ ಅರಸನಿಗೆ ಸತ್ಯವೇ ಸದಾ ಬಲವನ್ನು ನೀಡುತ್ತದೆ. ಆದ್ದರಿಂದ ರಾಜನಾದವನು ಸತ್ಯವನ್ನು ಬಿಟ್ಟು ಬದುಕಬಾರದೆಂಬ ವಿಚಾರ ವ್ಯಕ್ತವಾಗಿದೆ. ಅರಸನಾದವನಲ್ಲಿ ಅಪೇಕ್ಷಿತವಾದ ಮೊಟ್ಟ ಮೊದಲ ಗುಣ 'ಪರನಾರಿ ಸೋದರತೆ' ಎಂಬ ಮಾತು ಮನನೀಯವಾಗಿದೆ. ಏಕೆಂದರೆ ಹೆಣ್ಣಿನಿಂದಾಗಿಯೇ ಅನೇಕ ಅರಸರು ಅರಸೊತ್ತಿಗೆಗಳು ಹೇಳ ಹೆಸರಿಲ್ಲದಂತೆ ನಾಶವಾಗಿವೆ ಇದು ಪುರಾಣ ಪ್ರಸಿದ್ಧವಷ್ಟೇ ಅಲ್ಲ ಇತಿಹಾಸ ಪ್ರಸಿದ್ಧವಷ್ಟೇ ಸತ್ಯ.

ಅದಕ್ಕೆ ಪೂರಕವಾಗಿ ರಾಜನಾದವನು ರಾಜಧರ್ಮಕ್ಕೆ ಶೋಭೆ ತರುವಂತಹ ವೀರ ಪರಾಕ್ರಮವುಳ್ಳವನಾಗಿರಬೇಕು ಹಾಗಿದ್ದಾಗ ಮಾತ್ರ ಅವನ ರಾಜ್ಯ ನಿರ್ಭಯ ನೆಮ್ಮದಿಗಳಿಂದ ಕಂಗೊಳಿಸಿ ರಾಜ್ಯದ ವಿಸ್ತಾರ ಹೆಚ್ಚಬಹುದು, ಅಷ್ಟೇ ಅಲ್ಲ ಅವನ ಗುಣವಂತಿಕೆ ಅವನ ಉಸಿರಾಗಿರಬೇಕು ಹೀಗಿದ್ದಲ್ಲಿ ಆತನ ರಾಜ್ಯದಲ್ಲಿ ರಾಜಲಕ್ಷ್ಮೀ ಶಾಶ್ವತ ಸ್ಥಾನ ಪಡೆದು ಸದಾ ಸಂತೋಷದಿಂದ ಸ್ಥಿರವಾಗಿ ನಿಲ್ಲಬಲ್ಲಳು. ಆಗ ರಾಜಸೌಧ ವಿವಿಧ ಸುಖ ಸಮೃದ್ಧಿಗೆ ಅಡಿಗಲ್ಲಾಗಬಹುದು ಎಂಬ ವಿಚಾರವಂತಿಕೆಯ ಮಾತನ್ನು ರಾಜನಾದವನಿಗೆ ಸಲಹೆ ನೀಡುತ್ತಾನೆ.

**ಒಕ್ಕಲುತನಕ್ಕೆ ಆಶ್ರಯ ಕೊಡುವವನು :** ಒಕ್ಕಲುತನವು ಮಾನವನ ಪುರಾತನ ವೃತ್ತಿಗಳಲ್ಲೊಂದಾಗಿದೆ. ಭೂಮಿಯನ್ನು ಉಳಿಮೆ ಮಾಡಿ ಸಸಿಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗಗಳನ್ನು ಪಡೆಯುವುದೇ ವ್ಯವಸಾಯವಾಗಿದೆ. ಭಾರತದ ಆಹಾರ ವ್ಯವಸ್ಥೆಯಲ್ಲಿ ಒಕ್ಕಲುತನವು ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿ ಎಂಬ ಪದದ ಆಂಗ್ಲರೂಪ 'ಅಗ್ರಿಕಲ್ಚರ್' ಇದು ಲ್ಯಾಟೀನ ಭಾಷೆಯ ಅಗ್ರಿಕಲ್ಚುರ ಎಂಬ ಪದದ ಇಂಗ್ಲಿಷ್ ರೂಪಾಂತರ. ಭೂಮಿಯನ್ನು ಉಳುವಿಕೆ ಎಂಬ ಅರ್ಥ ಪಡೆಯುತ್ತದೆ. ಈ ಒಕ್ಕಲುತನಕ್ಕೆ ರಾಜನಾದವನು ಆಶ್ರಯ ಕೊಡಲೇಬೇಕು. ಕೃಷಿಕ ಈ ದೇಶದ ಬೆನ್ನೆಲುಬು ಅವನಿಗೆ ಆಶ್ರಯ ಕೊಟ್ಟರೆ ಮಾತ್ರ ಒಂದು ನಾಡಿನ ಉನ್ನತಿ ಸಾಧ್ಯ ಎಂಬುದನ್ನು ಹೇಳುತ್ತಾನೆ.

ಒಕ್ಕಲನು ನಲುಗಿಸದೆ । ಲೆಕ್ಕವನು ಸಿಕ್ಕಿಸದೆ ।
ಕಕ್ಕುಲತೆಯಿಂದ ನಡೆಯಿಸುವ ಅರಸು ತಾ ।
ಚಕ್ಕಣದವಿರುವ ಸರ್ವಜ್ಞ

ಬಂಡಾರ ತುಂಬಿ ನೀ । ಬಂಡಿಯಲಿ ಹೇರುವರೆ ।
ಮಂಡಲವ ನಾಳಿ ಮೆರೆಯುವರೆ ಒಕ್ಕಲನು ।
ಕೊಂಡಾಡಬೇಕು ಸರ್ವಜ್ಞ

ಒಂದು ಸಮೃದ್ಧ ರಾಜ್ಯ ಆ ನಾಡಿನ ಕೃಷಿಯನ್ನು ಅವಲಂಬಿಸಿರುತ್ತದೆ. ಕೃಷಿಕ ದೇಶದ ಬೆನ್ನೆಲುಬು ಆತನೇ ಸಮಸ್ತ ನಾಡಿನ ಪ್ರಜೆಗಳಿಗೆ ಅನ್ನದಾತ. ತನ್ನ ಪರಿಶ್ರಮದಿಂದ ದುಡಿದು ಇಡೀ ನಾಡಿಗೆ ಅನ್ನ ಒದಗಿಸುತ್ತಾನೆ. ಅಂತಹ ಒಕ್ಕಲು ಮಕ್ಕಳನ್ನು ಬಿಕ್ಕಿಸಿದರೆ ಆ ನಾಡಿಗೆ ಒಳಿತಾಗುವುದಿಲ್ಲ ಎಂಬ ಆಶಯವನ್ನು ಕವಿ ಸರ್ವಜ್ಞ ಈ ರೀತಿ ಹೇಳುತ್ತಾನೆ. ಒಕ್ಕಲು ಮಕ್ಕಳನ್ನು ರಾಜ ಸದಾ ನೆನಪಿನಲ್ಲಿಡಬೇಕು ಅವರಿಂದಲೇ ರಾಜ್ಯಕ್ಕೆಲ್ಲ ಅನ್ನ ಮತ್ತು ಸಂಪತ್ತು ದೊರೆಯುತ್ತದೆ. ಅವರಿಂದಲೇ ರಾಜ್ಯದ ಜನರೆಲ್ಲ ಬಾಳಿ ಬದುಕಲು ಸಾಧ್ಯ. ಅಂತಹವರನ್ನು ಮೆಚ್ಚುಗೆಯ ಮಾತುಗಳಿಂದ ಮನ ಒಲಿಸಿಕೊಂಡು ಅವರು ಮೈ ಮುರಿದು ದುಡಿಯುವಂತೆ ಸದಾ ಪ್ರೇರೇಪಿಸಬೇಕು ಅಂದಾಗ ಆ ರಾಜ್ಯ ಸಂಪತ್ತಿನ ಆಗರವಾಗುತ್ತದೆ.

ರಾಜ್ಯದ ಹಿತಸಾಧನೆಯನ್ನು ಅವರಿಂದ ಸಾಧಿಸಿಕೊಂಡಷ್ಟಕ್ಕೆ ಒಕ್ಕಲಿಗರು ಸಮಾಧಾನಿಗಳಾಗ ಕೂಡದು, ತನ್ನ ನಾಡಿನ ಜೀವನಾಡಿ ಎನಿಸಿದ ಒಕ್ಕಲು ಮಕ್ಕಳು ಸದಾ ಸಂತೃಪ್ತರಾಗಿರುವಂತೆ ಅವರನ್ನು ನೋಡಿಕೊಳ್ಳಬೇಕು. ಹಾಗಿದ್ದಾಗ ಮಾತ್ರ ಅರಸನ ಭಂಡಾರ ಬಂಡಿ ತುಂಬುವಷ್ಟು ಬೆಳೆಯಬಹುದು. ಇಡೀ ಮಂಡಲವೆಲ್ಲ ಸಮೃದ್ಧಿಯ ಬೀಡಾಗಬಹುದು. ಅಷ್ಟೇ ಅಲ್ಲ ಸರ್ವ ವಿಧದಿಂದಲೂ ಸುಖ ಸಂತೃಪ್ತಿಗೆ ಆಗರವಾಗಬಹುದು. ರಾಜನಾದವನು ಒಕ್ಕಲು ಮಕ್ಕಳನ್ನು ಬಿಕ್ಕಿಸದೇ ನಲುಗಿಸದೆ ಕೊಂಡಾಡುತಿರಬೇಕು. ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಮೇಟಿ ವಿದ್ಯೆಗೆ ಪ್ರಧಾನ ಸ್ಥಾನ ನೀಡಬೇಕು ಅಂದಾಗ ರಾಜ್ಯ ಸುಭಿಕ್ಷವಾಗಿರಲು ಸಾಧ್ಯ. ಸರ್ವಜ್ಞ ತನ್ನ ಕಾಲಜ್ಞಾನ ದೃಷ್ಟಿಯಿಂದ ಇಂದು ರಾಜ್ಯವಾಳುವ

ನಾಯಕರು ಒಕ್ಕಲಿಗರನ್ನು ಬಿಕ್ಕಿಸುವುದು ಅಂದು ಅವನಿಗೆ ಗೊತ್ತಾಗಿರಬಹುದೇ ಅಥವಾ ದುರ್ಮಾರ್ಗದ, ದುರ್ನಡತೆಯ, ದುರಾಚಾರದ ನಾಯಕರು ಮುಂದೊಂದು ದಿನ ಈ ನಾಡನ್ನು ಆಳಬಹುದು ಎಂಬ ಅರಿವು ಅವನಲ್ಲಿ ಆಗಲೇ ಮನದಲ್ಲಿ ಮೂಡಿರಬಹುದೇ ಈ ಮೇಲಿನ ವಚನಗಳನ್ನು ನೋಡಿದಾಗ ಈ ಮಾತು ಪ್ರಸ್ತುತ ದಿನಮಾನಕ್ಕೆ ಕನ್ನಡಿ ಹಿಡಿದಂತಿದೆ.

**ರಾಜರಲ್ಲಿ ಹೇಗೆ ವರ್ತಿಸಬೇಕು :** ರಾಜರಾದವರಲ್ಲಿ ಅಥವಾ ನಾಡನ್ನು ಆಳುವ ನಾಯಕರಲ್ಲಿ ನಾವು ಹೇಗೆ ವರ್ತಿಸಬೇಕು ಎಂಬ ಸೂಚನೆಯನ್ನು ಕವಿ ನೀಡುತ್ತಾನೆ.

ಚಿತ್ತವರಸಿನ ಕರದ । ಬೆತ್ತ ತಾ ಮಣಿದಂತೆ ।
ಕುತ್ತ ಹೋಗುವುದು ಅರಸೊಲಿಯೆ, ಮುನಿದರೆ ।
ಕತ್ತು ಹೋಗುವುದು ಸರ್ವಜ್ಞ

ಅರಸೊಲಿದು ನಡೆಸಿದರೆ । ಸಿರಿಯಕ್ಕು ಜಸವಕ್ಕು ।
ಕರಿ ತುರಗ ಬಲವು ಪಿರಿದಕ್ಕು, ಮುನಿದರೆ ।
ಕರನಾಶವಕ್ಕು ಸರ್ವಜ್ಞ

ಮನಸ್ಸು ಮಾಡಿದರೆ ಬಿರುಸಾದ ಹಾಗೂ ಕಠಿಣವಾದ ಬೆತ್ತವೂ ಮಣಿಯಬಹುದು ಹಾಗೆಯೇ ನಮಗೆ ಬಂದ ಕಷ್ಟ ಕಾರ್ಪಣ್ಯಗಳು ದೂರಾಗಬಹುದು ಅದು ಅರಸನೊಲಿದರೆ ಮಾತ್ರ. ಅದೇ ಅರಸ ಮುನಿದರೆ ಕತ್ತು ಹೋಗುವುದು ಖಂಡಿತ ಆದ್ದರಿಂದ ರಾಜನಲ್ಲಿ ವರ್ತಿಸುವಾಗ ಬಹಳಷ್ಟು ಎಚ್ಚರಿಕೆಯಿಂದ ಜಾಗೃತೆಯಿಂದ ವರ್ತಿಸಬೇಕೆಂಬ ವಿನಯದ ನುಡಿಯನ್ನು ಹೇಳುತ್ತಾನೆ. ಇಲ್ಲಿ ಒಂದು ಮಾತು ಗೋಚರವಾಗುತ್ತದೆ ರಾಜನಾದವನು ರಾಜ್ಯದ ಪರಮ ಅಧಿಕಾರವನ್ನು ಹೊಂದಿರುತ್ತಾನೆ. ಆತ ಮನಸ್ಸು ಮಾಡಿದರೆ ಏನು ಬೇಕಾದರು ಮಾಡಬಹುದು ಎಂಬ ಸತ್ಯ ಗೋಚರಿಸುತ್ತದೆ. ಅರಸನು ಒಲಿದರೆ ಸಿರಿ–ಸಂಪತ್ತು, ಕರಿ, ತುರಗ ಹಿರಿದಾದ ಸಂಪತ್ತು ನಮಗೆ ಬರಬಹುದು ಆದರೆ ಆತ ಮುನಿದರೆ ನಮ್ಮ ಅವನತಿಯು ಆಗಬಹುದೆಂಬ ಎಚ್ಚರಿಕೆಯ ಸಂದೇಶವನ್ನು ನೀಡಿದ್ದಾನೆ. ಅರಸರ ದೌರ್ಬಲ್ಯಗಳನ್ನು ಗಮನಿಸಿದ ಸರ್ವಜ್ಞ ಅಂಥ ಅರಸರಲ್ಲಿ ಪರಿವಾರದವರು ಹೇಗಿರಬೇಕೆಂಬ ಎಚ್ಚರಿಕೆಯ ಸೂಚನೆಯನ್ನು ನೀಡುತ್ತಾನೆ. ನಾಡಿನ ಸಾಮ್ರಾಜ್ಯದ ಶ್ರೇಷ್ಠರೆನಿಸಿಕೊಂಡ ರಾಜರಲ್ಲಿ ವೈರತ್ವ ಕಟ್ಟಿಕೊಳ್ಳಬಾರದು, ವೈರತ್ವ ಕಟ್ಟಿಕೊಂಡರೆ ಬಾಳ್ವೆಯೇ ಕೆಟ್ಟುಹೋಗಬಹುದು ಅರಸನ ಒಡ್ಡೋಲಗದಲ್ಲಿ ಅವನ ನೀತಿ ನಿಯಮಗಳಿಗೆ ನಾವು ಸರಿದೋರಬೇಕು. ಮೇಲರಿಯ ಅಧಿಕರೊಳು ಕಾಳಗವ ತೊಡಗಿದರೆ  ಬಾಳುವೆಯು ಕೆಟ್ಟು ಬಡವಕ್ಕು, ಬೆಸಲಾದ  ಚೇಳಿನಂತಕ್ಕು ಸರ್ವಜ್ಞ,

ಅರಸನೊಡ್ಡೋಲಗದಿ । ಸರಿಸವನು ಅಗಲದಿರು ।
ಸರಸ ನಿಂದೆಯಲಿ ಇರದಿರು, ಆರಿಗೂ ।
ಬಿರುಸು ಬೇಡೆಂದ ಸರ್ವಜ್ಞ

ಸರಸ ಹಾಗೂ ನಿಂದೆಯಿಂದ ದೂರವಿರಬೇಕು ರಾಜ ಹಾಗೂ ಪರಿವಾರದ ಯಾರೊಂದಿಗೂ ವಿರಸವನ್ನು ಕಟ್ಟಿಕೊಳ್ಳಬಾರದು. ಅದು ರಾಜನ ವಿರೋಧವಂತೂ ಬೇಡವೇ ಬೇಡ. ಅವನೊಂದಿಗೆ ಸದಾ ಸಂತೋಷದಿಂದ ಹಸನ್ಮುಖಿಯಿಂದ ಬಾಳ್ವೆ ಮಾಡಬೇಕು. ಇಲ್ಲಿ ಸರ್ವಜ್ಞ ಒಂದು ಅಂಶವನ್ನು ಮನಗಾಣಿಸುತ್ತಾನೆ ರಾಜನಾದವನು

ಕೋಪಿಷ್ಟನಾಗಿರುತ್ತಾನೆ ತನ್ನ ಅಧಿಕಾರ ಬಲದಿಂದ ಏನನ್ನಾದರು ಮಾಡಲು ಹಿಂಜರಿಯುವುದಿಲ್ಲ ಆದ್ದರಿಂದ ಅಂತಹ ರಾಜರಲ್ಲಿ ಕದನ, ದ್ವೇಷ, ವಿರೋಧ ಕಟ್ಟಿಕೊಳ್ಳಬಾರದು ಎಂಬ ಆಶಯ ವ್ಯಕ್ತವಾಗಿದೆ.

**ಅಯೋಗ್ಯ ರಾಜ :** ರಾಜ್ಯಕ್ಕೆ ಹಿರಿಯನೆನಿಸಿದ ರಾಜನು ಹೇಗಿರಬೇಕು ಎಂದು ಹೇಳುವಲ್ಲಿ ಕವಿ ಸರ್ವಜ್ಞ ಅಯೋಗ್ಯ ರಾಜರನ್ನು ಪರಿಚಯಿಸುತ್ತಾನೆ. ಅಷ್ಟೇ ಅಲ್ಲ ಅಂತಹ ಅಯೋಗ್ಯರಿಂದ ನಾಡು ಹಾಳಾಗುವುದರಲ್ಲಿ ಸಂಶಯವೇ ಇಲ್ಲ. ಕಂಡದ್ದನ್ನು ಕೆಂಡದಂತೆ ಕಾರುವ ಸರ್ವಜ್ಞ ಹಿರಿದಾದ ನಾಡಿನಲ್ಲಿ ಲೋಕ ಸಂಚಾರಿಯಾಗಿ ತಿರುಗುವಾಗ ಈ ನಾಡಿನ ಅಯೋಗ್ಯ ರಾಜರ ದರುಶನವು ಆಗಿರಬಹುದು.

ಹಿರಿತನವು ಹೇಡಿಂಗೆ । ಗುರುತನವು ಮೂಢಂಗೆ ।
ದೊರೆತನವು ನಾಡ ನೀಚಂಗೆ ದೊರೆದಿಹರೆ ।
ಧರೆಯೆಲ್ಲ ಕೆಡಗು ಸರ್ವಜ್ಞ

ಕುದುರೆಯನು ಏರದ । ಕದನವನು ಜಯಿಸದ ।
ಸುದತಿಯರ ಒಲುಮೆ ಅರಿಯದ ಅರಸು ತಾ ।
ಸಿದಿಗೆಯ ಹೆಣನು ಸರ್ವಜ್ಞ

ಅವರ ಅಸಮರ್ಥತೆ, ಅಯೋಗ್ಯತೆ, ನಿರರ್ಥಕತೆಯನ್ನು ಕಂಡು ಹೀಗೆ ಹೇಳುತ್ತಾನೆ. ಹೇಡಿಗೆ ಹಿರಿತನ ಬರಬಾರದು, ಮೂಢನಾದವನಿಗೆ ಗುರುತನವು ಸಲ್ಲಬಾರದು, ಅದೇ ರೀತಿ ಕಡು ನೀಚನಾದವನಿಗೆ ಈ ನಾಡಿನ ದೊರೆತನ ದೊರೆತರೆ ಆ ನಾಡು ಕೇಡಿನಲ್ಲಿ ಮುಳುಗಿ ಹೋಗುತ್ತದೆ. ಇಂತಹ ಕಡು ಮೂರ್ಖರಾದವರು ನಾಡನ್ನು ಆಳಲು ಅಯೋಗ್ಯರು, ಕೊಟ್ಟ ಕುದುರೆಯನ್ನು ಏರಲು ಅಸಮರ್ಥರಾದ ಭಯಂಕರ ಯುದ್ಧದಲ್ಲಿ ವೈರಿಗಳಿಗೆ ಬೆನ್ನು ತೋರಿಸಿ ಬರುವ ಹೇಡಿ ರಾಜರಿಗೆ ಹಾಗೂ ನಾಡಿನ ಕಿರೀಟದಂತಿರುವ ವನಿತೆಯರ ಪ್ರೀತಿಯನ್ನು ಅರಿಯದ ಅರಸು ಸತ್ತ ಹೆಣವಿದ್ದಂತೆ. ಅಂಥವರು ಈ ನಾಡನ್ನು ಆಳಲು ಅಯೋಗ್ಯರು, ಅಂತವರಿಗೆ ಈ ನಾಡು ಈಡಾಗದಿರಲೆಂಬುದೆ ಸರ್ವಜ್ಞನ ಆಶಯವಿದ್ದಂತಿದೆ. ಹಿಂದೆ ಆಳಿ ಹೋದ ಅಥವಾ ಮುಂದೆ ಆಳಬಹುದಾದ ಹೇಡಿ ರಾಜರನ್ನು ಮೂಢ ಗುರುಗಳನ್ನು ಕವಿ ಖಂಡಿಸದೇ ಬಿಟ್ಟಿರುವುದಿಲ್ಲ. ನಾಡಿನ ಪ್ರಜೆಗಳಿಗೆ ದೊರೆಗಳನ್ನು ಎದುರು ಹಾಕಿಕೊಳ್ಳಬಾರದು ಎಂದು ಹೇಳುವ ತಾನೇ ಇಂತಹ ದೊರೆಗಳ ಬಗ್ಗೆ ಕಠಿಣವಾಗಿ ಬಿಂಬಿಸುವುದನ್ನು ನೋಡಿದಾಗ ಸರ್ವಜ್ಞ ಯಾವುದೇ ಜಾತಿ, ಮತ, ಅರಸು, ಅರಸೋತ್ತಿಗೆ ಬಯಸಿದವನಲ್ಲ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸೆಂದು ಬದುಕಿದಷ್ಟು ದಿನ ಸ್ವಾಭಿಮಾನಿಯಾಗಿಯೇ ಬದುಕಿ ಹೋಗಿರುವುದು ಸೂರ್ಯನಷ್ಟೇ ಸತ್ಯವೆಂಬುದು ಅವನ ವಚನಗಳಿಂದ ಅರಿವಾಗುತ್ತದೆ.

**ಶಸ್ತ್ರವಿದ್ಯೆ ಅರಿಯದವನು :** ನಾಡಾಳಿಗೆ ಅಂದರೆ ರಾಜನಾದವನಿಗೆ ಶಸ್ತ್ರವಿದ್ಯೆ ಅಗತ್ಯವಾಗಿ ಬೇಕು. ಎಂದು ಹೇಳುವ ಸರ್ವಜ್ಞ ಪ್ರಜೆಗಳನ್ನು ರಕ್ಷಣೆ ಮಾಡುವಲ್ಲಿ ರಾಜನು ಸಮರ್ಥನಾಗಿರಬೇಕು ಹಾಗೂ ಶಸ್ತ್ರವಿದ್ಯಾ ಪಾರಂಗತನಾಗಿರಬೇಕು. ಏಕೆಂದರೆ ಯಾವ ಸಂದರ್ಭದಲ್ಲಿ ಯಾವ ಗಳಿಗೆಯಲ್ಲಿ ಅನಿರೀಕ್ಷಿತವಾದ ಸಂಚಕಾರ ಬಂದೊದಗಬಹುದು ಇರಿಯಲರಿಯದ ಸುರಿಗೆಯನ್ನು ತನ್ನ ಬಳಿ ಇಟ್ಟುಕೊಂಡು ಮೆರೆದರೇನು ಪ್ರಯೋಜನ, ವೈರಿ ಬಂದಾಗ ಅವನನ್ನು ಸಂಹರಿಸದ (ತರಿಯದ) ಖಡ್ಗವಿದ್ದು ಏನು ಪ್ರಯೋಜನ. ಕರವೆತ್ತಿ ಮಸೆದು ಹಿರಿದಾದ ಖಡ್ಗವನ್ನು ಇಟ್ಟುಕೊಂಡು ಕಡುವೈರಿ ಬಂದಾಗ ಅದನ್ನು ಹಿರಿದು ಯುದ್ಧ ಮಾಡದೆ ಇದ್ದರೆ ಅದನ್ನು ಹುರಿದು ಹಾಕುವುದೇ ಲೇಸು.

ಇರಿಯಲರಿಯದೆ ಸುರಿಗೆ । ಧರಿಸಿ ಮೆರೆದಡದೇನು ।
ಅರಿಯು ಬಂದಾಗ ತರಿಯದ ಸುರಿಗೆಯನು ।
ಅರೆದು ಕುಡಿಯೆಂದ ಸರ್ವಜ್ಞ

ಕರವೆತ್ತಿ ಮಸೆಯುವನು । ಹಿರಿದೊತ್ತಿ ಹಾಕುವನು ।
ಮುರಿಯ ಬಂದಾಗ ಹಿರಿಯದ ಸುರಿಗೆಯನು ।
ಹುರಿದು ಮುಕ್ಕೆಂದ ಸರ್ವಜ್ಞ

ರಾಜನಾದವನು ಹರಿತವಾದ ಖಡ್ಗವನ್ನು ತನ್ನ ಹತ್ತಿರವಿಟ್ಟುಕೊಂಡರೆ ಮಾತ್ರ ಪರಾಕ್ರಮಿ ಎನಿಸಲಾರ ಅದನ್ನು ಹಿರಿದೊತ್ತಿ ಕಡು ವೈರಿಗಳ ರುಂಡ ಚಂಡಾಡುವಂತಿದ್ದರೆ ಅದು ಶಸ್ತ್ರವಿದ್ಯೆ ಪ್ರವೀಣನಾದ ರಾಜನ ಪರಾಕ್ರಮವನ್ನು ಎತ್ತಿ ತೋರಿಸುತ್ತದೆ. ಇಲ್ಲದಿದ್ದಲ್ಲಿ ಸುರಿಗೆಗೂ ಶೋಭೆಯಲ್ಲ, ರಾಜನಿಗೂ ತರವಲ್ಲ ಎಂಬ ವಿಚಾರವನ್ನು ತಿಳಿಸುವಲ್ಲಿ ಕವಿ ಸರ್ವಜ್ಞ ಶಸ್ತ್ರ ಹಾಗೂ ರಾಜನಿಗೆ ಎಂತಹ ಸಾಮರ್ಥ್ಯವಿರಬೇಕೆಂಬುದನ್ನು ಎಚ್ಚರಿಸುತ್ತಾನೆ.

**ರಣಹೇಡಿ ಅರಸು :** ಅರಸನ ದೌರ್ಬಲ್ಯಗಳನ್ನು ಕವಿ ಸರ್ವಜ್ಞ ಗಮನಿಸದೇ ಬಿಟ್ಟಿರುವುದಿಲ್ಲ. ಆತನ ಅನುಭವದಲ್ಲಿ ಅರಸರು ರಣಹೇಡಿಗಳು ವೈರಿಗೆ ಬೆನ್ನು ತೋರುವವರು ಕಂಡಾಗ ಅಂತವರನ್ನು ಎಚ್ಚರಿಸದೇ ಬಿಟ್ಟಿರುವುದಿಲ್ಲ.

ತಾಗದ ಬಿಲು ಹೊಲ್ಲ । ಆಗದ ಮಗ ಹೊಲ್ಲ ।
ಆಗೀಗಲೆಂಬ ನುಡಿ ಹೊಲ್ಲ, ರಣಕೆ ಇದಿ ।
ರಾಗದವ ಹೊಲ್ಲ ಸರ್ವಜ್ಞ

ಹುರಿಯಾದನೂಟಕ್ಕೆ । ಹೊರೆಯಾದ ನವಧರೆಗೆ ।
ಮುರಿದು ಬಂದಿರ್ದ ಕಲಿಯೊಡನೆ ಹೋರದನು ।
ಇರುವದೇಕೆಂದ ? ಸರ್ವಜ್ಞ

ತನ್ನ ಕೈಯಲ್ಲಿರುವ ಬಿಲ್ಲನ್ನು ವೈರಿಗಳ ಮೇಲೆ ಪ್ರಯೋಗಿಸಿ ಸೆಣಸಾಡದ ರಾಜರನ್ನು ಕಂಡು ತಾಗದ ಬಿಲು ಹೊಲ್ಲ, ಆಗದ ಮಗ ಹೊಲ್ಲ ಆಗೀಗಲೆಂಬ ನುಡಿ ಹೊಲ್ಲ ಎಂಬಂತೆ ರಣಹೇಡಿಯಾದ ರಾಜನಿದ್ದು ವ್ಯರ್ಥ, ಮನೆಗೆ ಬೇಡವಾದ ಮಗನಿದ್ದು ಸತ್ತಂತೆ. ಸಂದರ್ಭ ಸಮಯಾನುಸಾರ ಕೆಲಸ ನಿರ್ವಹಿಸದೆ ಆಗ ಮಾಡುತ್ತೇನೆ ಈಗ ಮಾಡುತ್ತೇನೆ ಎಂದು ಸಮಯ ಸಾಧಿಸುವವನು, ರಣರಂಗಕೆ ಎದುರಾಗಿ ಯುದ್ದ ಮಾಡದ ವೀರನಿದ್ದರೂ ಸರಿ ಬಿಟ್ಟರೂ ಸರಿ. ಕಲಿಯೊಡನೆ ಹೋರಾಡದ ರಾಜನಿದ್ದು ಫಲವಿಲ್ಲ ಅಂತಹ ರಾಜನಿಂದ ರಾಜ್ಯವು ಸುಭಿಕ್ಷವಾಗಿರಲಾರದು.

**ದುಷ್ಟ ಅರಸನಿಂದ ನಷ್ಟ :** ರಾಜನ ದುರಾಚಾರದಿಂದಾಗಿ ದುರ್ದೆಸೆ ಹೊಂದಿದ ರಾಜ್ಯಗಳನ್ನೂ ಕಾಣಬಹುದು. ಪಟ್ಟದ ಆನೆಯೇ ತುಡುಗಿಗಿಳಿದರೆ, ಮಹಾಜ್ಞಾನಿಯಾದವನು ಮೂರ್ಖನಾದರೆ ಭೂಮಿಯನ್ನು ಆಳುವ ದೊರೆ ತಪ್ಪು ಮಾಡಿದರೆ ಮಾನವರಿಗುಳಿಗಾಲವೇ? ರಾಜ್ಯಕ್ಕೆ ಹಿರಿಯನೆನಿಸಿದ ರಾಜನೇ ಕೇಡಿಗೆ ಭಯಪಡದೆ ನ್ಯಾಯ ಪಕ್ಷಪಾತಿಯಾಗದೆ ಅನ್ಯಾಯವನ್ನೇ ರಕ್ಷಿಸುವವನಾದರೆ ತಾನು ಸರ್ವನಾಶ ಹೊಂದುವುದರೊಂದಿಗೆ ತನ್ನ ರಾಜ್ಯವನ್ನು ಅವಸಾನದಂಚಿನತ್ತ ಕೊಂಡೊಯ್ಯುತ್ತಾನೆ.

ಆನೆ ತಾ ತುಡುಗಾಗೆ । ಜ್ಞಾನಿ ಮೂರ್ಖನುಮಾಗೆ ।
ಭೂನಾಥ ಜಾರನಾದರೆ ಮಾಣಿಪುದು ।
ಮಾನವರಿಗಳವೆ ಸರ್ವಜ್ಞ

ಕೆಟ್ಟೀತು ಎಂಬ ಭಯ । ಬಿಟ್ಟು ನ್ಯಾಯವ ಮರೆತು ।
ಪಟ್ಟದ ಅರಸು ಅನ್ಯಾಯದಲಿ ನಡೆಯೆ ।
ಸೃಷ್ಟಿಗೆ ಕೇಡು ಸರ್ವಜ್ಞ

ಆತನ ದುರಾಚಾರ ದುಷ್ಕೃತ್ಯವೇ ಅನುಕರಣೀಯವಾಗಿ ದುಷ್ಟಶಕ್ತಿಗಳು ದುರ್ಜನರು ತಾಂಡವವಾಡಿ ಸಮಸ್ತ ರಾಜ್ಯವೇ ದುರ್ಗತಿಗೀಡಾಗುತ್ತದೆ. ಇಂತಹ ಸಂದರ್ಭದಲ್ಲಿ ಮಂತ್ರಿವರ್ಗ ಮತ್ತು ರಾಜ್ಯರಕ್ಷಣೆಯ ಹೊಣೆ ಹೊತ್ತ ಕಾವಲು ದಳದವರು, ಆಡಳಿತ ವರ್ಗದವರು ತಮ್ಮ ನಿಷ್ಪಕ್ಷಪಾತವಾದ ಕರ್ತವ್ಯಪ್ರಜ್ಞೆಯನ್ನು ಮೆರೆದು ರಾಜ್ಯದ ಉಳಿವಿಗೆ ಶ್ರಮಿಸಬೇಕು, ಅದನ್ನು ಬಿಟ್ಟು ಇವರು ಕೂಡ ತಮ್ಮ ಕರ್ತವ್ಯಪ್ರಜ್ಞೆಯನ್ನು ಬದಿಗೊತ್ತಿ ಅರಸನು ಮಾಡುವ ಕಾರ್ಯದಲ್ಲಿ ಪಾಲುದಾರಿಕೆ ಪಡೆದರೆ ಬಡಪಾಯಿ ಪ್ರಜೆಗಳ ಪಾಡೇನು? ರಾಜ್ಯವೆಲ್ಲ ದುರ್ಭಿಕ್ಷೆಗೀಡಾಗಿ ಪರಿವಾರದವರ ಬದುಕು ನರಕ ಸದೃಶ್ಯವಾಗಿ ಪರಿಣಮಿಸುವದರಲ್ಲಿ ಸಂಶಯವೇ ಇಲ್ಲ. ಕವಿ ಸರ್ವಜ್ಞ ರಾಜ ಮಂತ್ರಿ ಕಾಲ್ದಳ ಯಾರಾದರೂ ಸರಿ ಅವರು ತಪ್ಪು ಮಾಡಿದರೆ ಸಹಿಸದೇ ಖಂಡಿಸಬೇಕೆಂಬ ನೀತಿ ಮಾರ್ಗವನ್ನು ಉಪದೇಶಿಸುತ್ತಾನೆ.

**–:ಸಮಾಪ್ತಿ:–**

## ಆಧಾರ ಗ್ರಂಥಗಳು :


೧. **ರಾಜ್ಯಶಾಸ್ತ್ರ:** ಹೆಚ್.ಟಿ.ರಾಮಕೃಷ್ಣ ವಿಜಯ ಬುಕ್ ಡಿಪೋ ಮತ್ತು ಪ್ರಕಾಶನ, ಗದಗ–೧೯೮೮

೨. **ಸರ್ವಜ್ಞ ಮೂರ್ತಿ ವಚನಗಳು:** ಆಯ್ದ ವಚನಗಳ ಸಂಗ್ರಹ, ಶ್ರೀ ಜಿ.ವಿ.ಶಾಸ್ತ್ರಿ, ಪು.೬೮

೩. **ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ:** ಡಾ.ಎಂ.ಅಕಬರ ಅಲಿ. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೮೩

೪. **ಸರ್ವಜ್ಞ ಜೀವನ ಕೃತಿಗಳು ಹಾಗೂ ಸಂದೇಶ:** ಬಿ.ಕೆ.ಹೊಸಮಠ. ಪಿಎಚ್.ಡಿ ಪ್ರಬಂಧ. ಪು.೬

೫. **ಚನ್ನಪ್ಪ ಉತ್ತಂಗಿ, ಸರ್ವಜ್ಞನ ವಚನಗಳು:** ವಿಶೇಷಾವೃತ್ತಿ, ೧೯೨೪, ಗ್ರಂಥದ ಕೊನೆಯಲ್ಲಿಯ ಟಿಪ್ಪಣಿ

೬. Dr. A.S. Altekar: The Position of Women in Hindu Civilisation, 1962

೭. **ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು:** ಸಂ. ಡಾ.ವಿರೇಶ.ಬಡಿಗೇರ, ಪ್ರಸಾರಂಗ ಕ.ವಿ.ವಿ.ಹಂಪಿ–೨೦೧೪

೮. **ಬಸವ ಧರ್ಮ ದರ್ಶನ:** ರಂಜಾನ್ ದರ್ಗಾ. ವಿಮೋಚನ ಸಂಸ್ಥೆ ಅಥಣಿ–೨೦೧೫

೯. **ಕನ್ನಡ–ಇಂಗ್ಲಿಷ ಶಬ್ದಕೋಶ:** ಡಿ.ಕೆ.ಭಾರದ್ವಾಜ. ಪ್ರ.ಸಂಕೇಶ್ವರ ಪ್ರಿಂಟರ್ಸ ಗದಗ–೨೦೧೩

೧೦. **ಕೃಷ್ಣ ಸಂಬಂಧ:** ಪ್ರಜಾಪ್ರಭುತ್ವಕ್ಕಿಂತ ರಾಜ್ಯಾದಿಪತ್ಯವೇ ಮೇಲು. ಆದಾರ. ಶ್ರೀಲ ಪ್ರಭುಪಾ